# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

| ಸಂಪುಟ ೧೫೮ | ಮೈಸೂರು, ಸೋಮವಾರ, ೧೨, ಜೂನ್, ೨೦೨೩(ಜ್ಯೇಷ್ಠ, ೨೨, ಶಕವರ್ಷ, ೧೯೪೫) | ಸಂಚಿಕೆ ೩೪ |
|---|---|---|
| Volume 158 | MYSURU, MONDAY, 12, JUNE, 2023(JYESHTHA , 22, SHAKAVARSHA, 1945) | Issue 34 |


## ಭಾಗ ೬ಎ

**ಮೈಸೂರು ವಿಭಾಗಕ್ಕೆ ಮತ್ತು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣಕನ್ನಡ, ಕೊಡಗು, ಚಾಮರಾಜನಗರ, ಉಡುಪಿ ಜಿಲ್ಲೆಗಳಿಗೆ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು.**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪರೀಕ್ಷಾ ವಿಭಾಗ, ಮುಕ್ತಗಂಗೋತ್ರಿ, ಮೈಸೂರು – 570 006.

**ಸಂಖ್ಯೆ:ಕರಾಮುವಿ/ಪವಿ/ಘ.ವಿ./501/2023–24** **ದಿನಾಂಕ: 20–05–2023**

### ಅಧಿಸೂಚನೆ

### 18ನೇ ವಾರ್ಷಿಕ ಘಟಿಕೋತ್ಸವ – 2023

**ಕರ್ನಾಟಕ ರಾಜ್ಯ ಮುಕ್ತವಿಶ್ವವಿದ್ಯಾನಿಲಯದ ಹದಿನೆಂಟನೇ ವಾರ್ಷಿಕ ಘಟಿಕೋತ್ಸವವನ್ನು 2023ನೇ ಜೂನ್ ಮಾಹೆಯಲ್ಲಿ ನಡೆಸಲು ತಿರ್ಮಾನಿಸಲಾಗಿದ್ದು ಈ ಕೆಳಕಾಣಿಸಿರುವ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳು ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.**

- 2018–19ನೇ ಸಾಲಿನಲ್ಲಿ ಪ್ರವೇಶಾತಿ ಪಡೆದು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ಉತ್ತೀರ್ಣಗೊಂಡಿರುವ ಎಂ.ಎಸ್ಸಿ–ಮನೋವಿಜ್ಞಾನದ
  ವಿದ್ಯಾರ್ಥಿಗಳು.
- 2019–20ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ಉತ್ತೀರ್ಣರಾಗಿರುವ ಬಿ.ಎ., ಬಿ.ಕಾಂ.,
  ಎಂ.ಬಿ.ಎ., ಮತ್ತು ಎಲ್ಲಾ ಎಂ.ಎಸ್ಸಿ., **(ಮನೋವಿಜ್ಞಾನ ವಿಷಯವನ್ನು ಹೊರತುಪಡಿಸಿ)** ಕಾರ್ಯಕ್ರಮದ ವಿದ್ಯಾರ್ಥಿಗಳು.
- 2019–20ನೇ ಸಾಲಿನಲ್ಲಿ (ಜನವರಿ ಆವೃತ್ತಿ) ಪ್ರವೇಶಾತಿ ಪಡೆದು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ಉತ್ತೀರ್ಣರಾಗಿರುವ ಬಿ.ಎಡ್.,
  ಬಿ.ಲಿಬ್.ಐ.ಎಸ್ಸಿ., ಎಂ.ಲಿಬ್.ಐ.ಎಸಿ.,, ಎಂ.ಬಿ.ಎ., ಮತ್ತು ಎಲ್ಲಾ ಎಂ.ಎ., ಎಂ.ಕಾಂ., ಎಂ.ಎಸ್ಸಿ., **(ಮನೋವಿಜ್ಞಾನ ವಿಷಯವನ್ನು**
  **ಹೊರತುಪಡಿಸಿ)** ಕಾರ್ಯಕ್ರಮಗಳ ವಿದ್ಯಾರ್ಥಿಗಳು.
- 2020–21ನೇ ಸಾಲಿನಲ್ಲಿ (ಜುಲೈ ಆವೃತ್ತಿ) ಪ್ರವೇಶಾತಿ ಪಡೆದು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ಉತ್ತೀರ್ಣರಾಗಿರುವ ಎಲ್ಲಾ
  ಎಂ.ಲಿಬ್.ಐ.ಎಸಿ.,, ಮತ್ತು ಎಂ.ಎ., ಎಂ.ಕಾಂ., ಕಾರ್ಯಕ್ರಮಗಳ ವಿದ್ಯಾರ್ಥಿಗಳು.
- 2020–21ನೇ ಸಾಲಿನಲ್ಲಿ(ಜನವರಿ ಆವೃತ್ತಿ) ಪ್ರವೇಶಾತಿ ಪಡೆದು ಸೆಪ್ಟೆಂಬರ್/ಅಕ್ಟೋಬರ್–2022ರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ
  ಬಿ.ಲಿಬ್.ಐ.ಎಸ್ಸಿ., ಮತ್ತು ಎಂ.ಲಿಬ್.ಐ.ಎಸ್ಸಿ., ಕಾರ್ಯಕ್ರಮಗಳ ವಿದ್ಯಾರ್ಥಿಗಳು.

**ಘಟಿಕೋತ್ಸವ ನಡೆಯುವ ನಿಗದಿತ ದಿನಾಂಕ, ಸಮಯ ಮತ್ತು ಸ್ಥಳವನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ ಮತ್ತು ಇತರೆ ಮಾಧ್ಯಮಗಳಲ್ಲಿ ಶೀಘ್ರದಲ್ಲಿ ಪ್ರಕಟಿಸಲಾಗುವುದು.**

**1. ಘಟಿಕೋತ್ಸವ ಸಮಾರಂಭಕ್ಕೆ ಉಪಸ್ಥಿತಿಯಲ್ಲಿ ಭಾಗವಹಿಸಲು ಈ ಕೆಳಕಂಡ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.**

- ಪದಕ ಮತ್ತು ನಗದು ಬಹುಮಾನಕ್ಕೆ ಅರ್ಹರಾದ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮದ ಅಭ್ಯರ್ಥಿಗಳು.
- ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ಅಭ್ಯರ್ಥಿಗಳು ಮತ್ತು ಪಿಹೆಚ್.ಡಿ ಪದವೀಧರರು.

**2. ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಈ ಕೆಳಕಂಡ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.**

- ವಿಶ್ವವಿದ್ಯಾನಿಲಯವು ಸೆಪ್ಟೆಂಬರ್/ಅಕ್ಟೋಬರ್–2022ರವರೆಗೆ ನಡೆಸಿದ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಪರೀಕ್ಷೆಗಳಲ್ಲಿ ತೇರ್ಗಡೆಯಾದ

  ವಿದ್ಯಾರ್ಥಿಗಳು.

**3. ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಆನ್‌ಲೈನ್ ಮುಖಾಂತರವೇ ಸಲ್ಲಿಸಿ "ಉಪಸ್ಥಿತಿಯಲ್ಲಿ" ಅಥವಾ**

**"ಅನುಪಸ್ಥಿತಿಯಲ್ಲಿ" ಪದವಿ ಪ್ರಮಾಣ ಪತ್ರವನ್ನು ಪಡೆಯಬಹುದಾಗಿದೆ.**

ಘಟಿಕೋತ್ಸವ ಪ್ರಮಾಣಪತ್ರ ಪಡೆಯಲು ನಿಗದಿತ ನಮೂನೆಯ ಆನ್‌ಲೈನ್ ಅರ್ಜಿಯನ್ನು ವಿಶ್ವವಿದ್ಯಾನಿಲಯದ ಅಧಿಕೃತ ಜಾಲತಾಣ **www.ksoumysuru.ac.in** ಪ್ರಕಟಪಡಿಸಲಾಗಿದೆ, ಆನ್‌ಲೈನ್ ಅರ್ಜಿಯಲ್ಲಿ ಕೋರಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಆನ್‌ಲೈನ್‌ಮುಖಾಂತರವೇ ಭರ್ತಿ ಮಾಡಿ ಸಲ್ಲಿಸಲು ಮತ್ತು ಆನ್‌ಲೈನ್ ಮುಖಾಂತರವೇ ಶುಲ್ಕ ಪಾವತಿಸಲು ತಿಳಿಸಲಾಗಿದೆ. ಅರ್ಜಿಯಲ್ಲಿ ಸೂಚಿಸಿರುವ ಜಾಗದಲ್ಲಿ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರವನ್ನು ಕಡ್ಡಾಯವಾಗಿ **Scan** ಮಾಡಿ ನಮೂದಿಸುವುದು **(ಅಧಿಕೃತವಾದ, ಕರಾರುವಕ್ಕಾದ, Plain Background ಹೊಂದಿರುವ ಭಾವಚಿತ್ರವನ್ನು ಮಾತ್ರ ನಮೂದಿಸುವುದು ತಪ್ಪಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.)**

**4. ಅನುಪಸ್ಥಿತಿಯಲ್ಲಿ ಪದವಿ ಪ್ರಮಾಣ ಪತ್ರ ಪಡೆಯಲು ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮತ್ತು ಘಟಿಕೋತ್ಸವದಲ್ಲಿ ಭಾಗವಹಿಸಲು ಸಾಧ್ಯವಾಗದಂತಹ**

**ಅಭ್ಯರ್ಥಿಗಳಿಗೆ ಪದವಿ ಪ್ರಮಾಣ ಪತ್ರವನ್ನು ಘಟಿಕೋತ್ಸವ ಕಾರ್ಯಕ್ರಮ ನಡೆದ ನಂತರ ತ್ವರಿತ ಅಂಚೆ ಮೂಲಕ ಕಳುಹಿಸಿಕೊಡಲಾಗುವುದು.**

**5. ಯಾವುದೇ ವಿದ್ಯಾರ್ಥಿಯ ಅಂತಿಮ ವರ್ಷದ ಅಂಕಪಟ್ಟಿಯಲ್ಲಿ ದರ್ಜೆ ಘೋಷಣೆಯಾಗದಿದ್ದಲ್ಲಿ (Not Completed Lower Examination (NCL**

**ತೆರವುಗೊಂಡಿರದಿದ್ದಲ್ಲಿ) ಅಥವಾ ಇನ್ಯಾವುದೇ ತಿದ್ದುಪಡಿಗಳಿದ್ದಲ್ಲಿ, ತಿದ್ದುಪಡಿಗಾಗಿ ತಮ್ಮ ಮೂಲ ಅಂಕಪಟ್ಟಿಗಳನ್ನು ಕುಲಸಚಿವರು(ಪರೀಕ್ಷಾಂಗ) ಕರಾಮುವಿ,**

**ಮೈಸೂರು.ರವರ ವಿಳಾಸಕ್ಕೆ ದಿನಾಂಕ: 05–06–2023ರೊಳಗೆ ಸಲ್ಲಿಸಿ ಸರಿಪಡಿಸಿಕೊಂಡು ದರ್ಜೆ ಘೋಷಣೆ ಮಾಡಿಸಿಕೊಳ್ಳುವುದು. ತಪ್ಪಿದಲ್ಲಿ ಪದವಿ**

**ಪ್ರಮಾಣ ಪತ್ರವನ್ನು ಪಡೆಯಲು ಅರ್ಹರಾಗಿರುವುದಿಲ್ಲ.**

**6. ಘಟಿಕೋತ್ಸವ ಪ್ರಮಾಣ ಪತ್ರಕ್ಕೆ ನಿಗದಿಪಡಿಸಿರುವ ದಿನಾಂಕ ಮತ್ತು ಶುಲ್ಕಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.**

**ಉಪಸ್ಥಿತರು:** ಪದಕ ಮತ್ತು ನಗದು ಬಹುಮಾನ ಪುರಸ್ಕೃತರು, ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು ಮತ್ತು ಪಿಹೆಚ್.ಡಿ. ವಿದ್ಯಾರ್ಥಿಗಳು. : **ರೂ. 1,200/–**

**ಅನುಪಸ್ಥಿತರು:** ಎಲ್ಲಾ ಸ್ನಾತಕ, ಸ್ನಾತಕೋತ್ತರ ಮತ್ತು ಪಿಹೆಚ್.ಡಿ ವಿದ್ಯಾರ್ಥಿಗಳು. : **ರೂ. 1,500/–**

**ಮೇಲೆ ನಿಗದಿಪಡಿಸಿದ ಶುಲ್ಕದ ಜೊತೆಗೆ ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯತ್ವ ಶುಲ್ಕವನ್ನಾಗಿ ರೂ.500/– ಗಳನ್ನು ಕಡ್ಡಾಯವಾಗಿ ಪಾವತಿಸಲು ತಿಳಿಸಿದೆ.**

| ಶುಲ್ಕ ಪಾವತಿಸಲು ಕೊನೆಯ ದಿನಾಂಕ (ಉಪಸ್ಥಿತರಿಗೆ ಮಾತ್ರ) | |
|---|---|
| ದಂಡ ಶುಲ್ಕವಿಲ್ಲದೆ | **09-06-2023** |
| 100/– ರೂ. ದಂಡ ಶುಲ್ಕದೊಡನೆ | **15-06-2023** |

**ಆದೇಶದ ಮೇರೆಗೆ**

**ಕುಲಸಚಿವರು (ಪರೀಕ್ಷಾಂಗ)**

# Karnataka State Open University

Examination Branch, Muktha Gangothri, Mysuru-570006.

**No. KSOU/Exam/Conv/501/2023-24** **Date : 20-05-2023**

# NOTIFICATION

.

## 18th Annual Convocation - 2023.

**18th Annual Convocation of the Karnataka State Open University will be held during the month of June 2023 for the following programmes.**

- Candidates who have admitted M.Sc. in Psychology programme in the academic year 2018-19 and passed during September/October 2022 Examination.
- Candidates who have admitted to B.A., B.Com., M.B.A., and All M.Sc.**(Except Psychology)** programmes in the academic year 2019-20(July Cycle) and completed during September/October 2022 Examination.
- Candidates who have admitted to B.Lib.I.Sc, M.Lib.I.Sc., B.Ed., MBA., and all M.A., M.Com., M.Sc.**(Except Psychology)** programmes in the academic year 2019-20 (January cycle) and completed during September/October 2022 Examination.
- Candidates who have admitted to M.A, M.Com, B.Lib.I.Sc and M.Lib.I.Sc in the academic year 2020-21 (July Cycle) and completed during September/October 2022 Examination.
- Candidates who have admitted to B.Lib.I.Sc., & M.Lib.I.Sc., Programmesin the academic year 2020-21 (January Cycle) and completed during September/October 2022 Examination.

**Date, time and venue, will be notified soon in the official website and print media.**

**1. The following candidates are eligible to receive the degree certificate "IN-PERSON" at the Convocation Ceremony:**

- Eligible candidates of the Gold Medals and Cash Prizes in Under Graduate and Post Graduate Programmes.
- Post Graduate Programmes with first class and Ph.D. Awardees.

**2. The following candidates are eligible to get degree certificate "IN-ABSENTIA":**

- The candidates who have completed Under Graduate and Post Graduate Degrees during September/October 2022 Examination.

**3.** Candidates may obtain their degree certificate either "IN-PERSON" or "IN-ABSENTIA" by applying in prescribed format through online mode only. Online application Form is available in the KSOU official website **www.ksoumysuru.ac.in.** You are required to furnish the complete information in the online application and prescribed fee shall be paid through online mode only. Compulsorily upload the passport size colour photograph in the space indicated in the application. **(It's mandatory to upload official and plain background passport size colour photo only, otherwise such applications will be rejected).**

**4.** Those candidates who have applied for Degree Certificate "IN-ABSENTIA" and who are unable to participate in the convocation ceremony, Degree Certificates will be sent through speed post after the convocation ceremony.

**5.** Those students who have Not Completed Lower Examination (NCL) OR class not declared in the final year marks cards are directed to submit all their original marks cards to the Registrar (Evaluation) for correction and get class

declared on or before **Dated: 05.06.2023,** otherwise, such candidates are not being eligible to obtain degree certificate.

**6.** The prescribed fee and fixed date for obtaining degree certificate is as follows.

**"IN-PERSON":** Gold Medallists/ cash prize awardees, post graduate candidates with 1st Class & Ph.D. Awardees. : **Rs.1200/-**

**"IN ABSENTIA":** Under graduate and post graduate degree & Ph.D. Awardees. : **Rs.1500/-**

**NOTE: In addition to the above prescribed fee, Rs.500/- shall be paid compulsorily towards the membership Of Alumni Association.**

| LAST DATE FOR PAYMENT OF FEES (IN PERSON ONLY) | |
|---|---|
| WITHOUT FINE | 09-06-2023 |
| WITH FINE OF Rs. 100/- | 15-06-2023 |

**By Order**

**Registrar (Evaluation)**

**PD-46**

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ
ದ.ಕ., ಮಂಗಳೂರು - 575001

ಕರ್ನಾಟಕ ಸರ್ಕಾರ

Deputy Commissioner &
District Magistrate's Office,
Dakshina Kannada District,

---

ಸಂಖ್ಯೆ: ಗಭೂಇ/ಮರಳು/ಅಧಿಸೂಚನೆ/2023-24/ ದಿನಾಂಕ: 24-05-2023

## ಅಧಿಸೂಚನೆ

ಕರ್ನಾಟಕ ಹೊಸ ಮರಳು ನೀತಿ-2020 ಅನ್ನು ಅನುಷ್ಠಾನಗೊಳಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ ನಿಯಮಗಳು 2021 ನಿಯಮ 31-R4(iv) ರನ್ವಯ ಸುಳ್ಯ ತಾಲ್ಲೂಕು ಮರಳು ಸಮಿತಿ/ ಜಿಲ್ಲಾ ಮರಳು ಸಮಿತಿಯ ಸದಸ್ಯ ಇಲಾಖೆಯ ಅಧಿಕಾರಿಗಳು ದಿನಾಂಕ 18-03-2023 ರಂದು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಸುಳ್ಯ ತಾಲ್ಲೂಕು ಸಂಪಾಜೆ ಗ್ರಾಮ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಪಯಸ್ವಿನಿ ಹೊಳೆ 3ನೇ ಶ್ರೇಣಿಯ ನದಿ ಪಾತ್ರದಲ್ಲಿ ಮರಳು ಬ್ಲಾಕ್ ಗಳನ್ನು ಗುರುತಿಸಲಾಗಿರುತ್ತದೆ. ಸದರಿ ಮರಳು ಬ್ಲಾಕ್ ಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ 2021 ರ ನಿಯಮ 31-R3(iv) ರಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾ ಮರಳು ಸಮಿತಿಯಿಂದ ಮರಳು ಬ್ಲಾಕ್ ಗಳನ್ನು ಸಂಪಾಜೆ ಗ್ರಾಮ ಪಂಚಾಯಿತಿ, ಸುಳ್ಯ ತಾಲ್ಲೂಕಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿದೆ. ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯಿತಿ/ ಬ್ಲಾಕ್ ನಂ. | ಗ್ರಾಮ/ ಹೊಳೆ/ ಹೊಳೆ ಸ.ನಂ./ ವಿಸ್ತೀರ್ಣ (ಎಕರೆ/ ಸೆಂಟ್ಸ್) | ಅಂದಾಜು ಲಭ್ಯತೆ ಮರಳಿನ ಪ್ರಮಾಣ (ಮೆ.ಟನ್) | GPS Co-ordinates | | |
|---|---|---|---|---|---|---|---|
| | | | | | | ಅಕ್ಷಾಂಶ | ರೇಖಾಂಶ |
| 1 | ಸುಳ್ಯ | ಸಂಪಾಜೆ 01 | ಸಂಪಾಜೆ ಪಯಸ್ವಿನಿ ಸ.ನಂ.156/2ಎ1ಪಿ2, 143/1ಪಿ2 2.00 ಎಕರೆ | 1,376 | A<br>B<br>C<br>D | 12° 30' 02.2"<br>12° 30' 01.6"<br>12° 30' 00.9"<br>12° 30' 00.6" | 75° 32' 03.3"<br>75° 32' 03.3"<br>75° 32' 27.0"<br>75° 32' 27.5" |
| 2 | ಸುಳ್ಯ | ಸಂಪಾಜೆ 02 | ಸಂಪಾಜೆ ಪಯಸ್ವಿನಿ ಸ.ನಂ.121/1ಪಿ2 0.40 ಎಕರೆ | 278 | A<br>B<br>C<br>D | 12° 30' 01.2"<br>12° 30' 01.4"<br>12° 30' 00.5"<br>12° 30' 00.2" | 75° 32' 27.7"<br>75° 32' 27.2"<br>75° 32' 33.7"<br>75° 32' 33.6" |
| 3 | ಸುಳ್ಯ | ಸಂಪಾಜೆ 03 | ಸಂಪಾಜೆ ಪಯಸ್ವಿನಿ ಸ.ನಂ.118/ಪಿ2 1.00 ಎಕರೆ | 697 | A<br>B<br>C<br>D | 12° 30' 00.5"<br>12° 30' 00.1"<br>12° 29' 56.2"<br>12° 29' 56.8" | 75° 32' 34.0"<br>75° 32' 34.0"<br>75° 33' 02.0"<br>75° 33' 02.1" |
| 4 | ಸುಳ್ಯ | ಸಂಪಾಜೆ 04 | ಸಂಪಾಜೆ ಪಯಸ್ವಿನಿ ಸ.ನಂ.119/ಪಿ2 1.00 ಎಕರೆ | 697 | A<br>B<br>C<br>D | 12° 29' 56.5"<br>12° 29' 56.0"<br>12° 29' 53.1"<br>12° 29' 53.5" | 75° 33' 02.4"<br>75° 33' 02.3"<br>75° 33' 16.2"<br>75° 33' 16.5" |
| 5 | ಸುಳ್ಯ | ಸಂಪಾಜೆ 05 | ಸಂಪಾಜೆ ಪಯಸ್ವಿನಿ ಸ.ನಂ.115/ಪಿ2 2.00 ಎಕರೆ | 1,389 | A<br>B<br>C<br>D | 12° 29' 53.3"<br>12° 29' 53.1"<br>12° 29' 43.7"<br>12° 29' 43.3" | 75° 33' 16.6"<br>75° 33' 16.6"<br>75° 33' 42.2"<br>75° 33' 42.1" |

ಸಹಿ/-

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು

ಜಿಲ್ಲಾ ಮರಳು ಸಮಿತಿ

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

**PR-98**

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ದಂಡಾಧಿಕಾರಿಯವರ ಕಾರ್ಯಾಲಯ.
ದ.ಕ., ಮಂಗಳೂರು - 575001

ಕರ್ನಾಟಕ ಸರ್ಕಾರ

Deputy Commissioner &
District Magistrate's Office,
Dakshina Kannada District,
Mangaluru – 575 001

ಸಂಖ್ಯೆ: ಗಭೂಇ/ಮರಳು/ಅಧಿಸೂಚನೆ/2023-24/ ದಿನಾಂಕ: 26-05-2023

## ಅಧಿಸೂಚನೆ

ಕರ್ನಾಟಕ ಹೊಸಮರಳು ನೀತಿ-2020 ಅನ್ನು ಅನುಷ್ಠಾನಗೊಳಿಸಲು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು 1994 ರ ತಿದ್ದುಪಡಿ ನಿಯಮಗಳು 2021 ರ ನಿಯಮ31-R(4)(iii) & (iv) ರನ್ವಯ ಮಂಗಳೂರು ತಾಲೂಕು ಮರಳು ಸಮಿತಿಯು ಮಂಗಳೂರು ತಾಲೂಕು ಉಳಾಯಿಬೆಟ್ಟು ಗ್ರಾಮದ ವ್ಯಾಪ್ತಿಯಲ್ಲಿ ಹರಿಯುತ್ತಿರುವ ಫಲ್ಗುಣಿ ನದಿಪಾತ್ರದಲ್ಲಿ ಜಂಟಿಸ್ಥಳಪರಿಶೀಲನೆ ನಡೆಸಿ, ಮರಳುಬ್ಲಾಕ್ ಅನ್ನು ಗುರುತಿಸಿ ದಿನಾಂಕ 10-02-2023 ರಂದು ನಡೆದ ಮಂಗಳೂರು ತಾಲೂಕು ಮರಳು ಸಮಿತಿ ಸಭೆಯಲ್ಲಿ ಚರ್ಚಿಸಿ, ಜಂಟಿ ಸ್ಥಳ ಪರಿಶೀಲನಾ ವರದಿ, ಅಕ್ಷಾಂಶ/ರೇಖಾಂಶದ ನಕ್ಷೆ ಹಾಗೂ ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಮರಳು ಸಮಿತಿಗೆ ಸಲ್ಲಿಸಿರುತ್ತದೆ.

ತತ್ಸಂಬಂಧ, ದಿನಾಂಕ 04-03-2023 ರಂದು ನಡೆದ ಜಿಲ್ಲಾ ಮರಳು ಸಮಿತಿ ಸಭೆಯಲ್ಲಿ ಚರ್ಚಿಸಿದ್ದು, ಮಂಗಳೂರು ಉಪವಿಭಾಗದಡಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ವತಿಯಿಂದ ನಡೆಯುವ ನಿರ್ಮಾಣ ಕಾಮಗಾರಿಗಳಿಗೆ ಮರಳನ್ನು ಪೂರೈಸುವ ಸಲುವಾಗಿ ಕರ್ನಾಟಕ ಉಪಖನಿಜ ರಿಯಾಯಿತಿ ತಿದ್ದುಪಡಿ ನಿಯಮಗಳು 2021 ರ ನಿಯಮ31-R3(iv) & (v)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ ಜಿಲ್ಲಾ ಮರಳು ಸಮಿತಿಯು ಸದರಿ ಮರಳು ಬ್ಲಾಕ್ ಅನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ, ಮಂಗಳೂರು ಇವರಿಗೆ ಮೀಸಲಿರಿಸಿ ಅಧಿಸೂಚನೆ ಹೊರಡಿಸಿದೆ. ವಿವರ ಕೆಳಕಂಡಂತಿರುತ್ತದೆ.

| ಕ್ರ.ಸಂ | ತಾಲೂಕು | ಗ್ರಾಮ | ನದಿ | ಸ.ನಂ. | ವಿಸ್ತೀರ್ (ಎಕರೆ/ ಸೆಂಟ್ಸ್) | ಅಂದಾಜು ಪ್ರಮಾಣ (ಮೆ.ಟನ್) | GPS Co-ordinates | | |
|---|---|---|---|---|---|---|---|---|---|
| | | | | | | | | ಅಕ್ಷಾಂಶ | ರೇಖಾಂಶ |
| 1 | ಮಂಗಳೂರು | ಉಳಾಯಿಬೆಟ್ಟು | ಫಲ್ಗುಣಿ | 26 | 3.00 | 15480 | A<br>B<br>C<br>D<br>X | 12° 55' 12.03"<br>12° 55' 13.06"<br>12° 55' 09.06"<br>12° 55' 08.05"<br>12° 55' 12.02" | 74° 56' 39.09"<br>74° 56' 41.02"<br>74° 56' 47.00"<br>74° 56' 45.07"<br>74° 56' 38.06" |

ಸಹಿ/-
ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು
ಜಿಲ್ಲಾಮರಳುಸಮಿತಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

**PR-99**

ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ-573201.

ಕರ್ನಾಟಕ ಸರ್ಕಾರ

ಕಛೇರಿ : 08172-267345
265028, 253354
ನಿವಾಸ : 08172-268202
ಫ್ಯಾಕ್ಸ್ : 08172-265418
E-Mail: deo.hassan@gmail.com

Website:www.hassan-nic.in

ವಿಷಯ: ಚನ್ನರಾಯಪಟ್ಟಣ ಸಂಚಾರಿ ಪೊಲೀಸ್ ಠಾಣಾ ಸರಹದ್ದಿನ ರಸ್ತೆಯಲ್ಲಿ ಸಂಚಾರ ದಟ್ಟಣೆಯನ್ನು ಸುಗಮಗೊಳಿಸುವ ದೃಷ್ಠಿಯಿಂದ ವಾಹನಗಳನ್ನು ನಿಲುಗಡೆ ಮಾಡಲು ಆದೇಶವನ್ನು ಹೆರಡಿಸುವಚಿತೆ ಕೋರಿರುವ ಬಗ್ಗೆ.

ಉಲ್ಲೇಖ: ಪೊಲೀಸ್ ಅಧೀಕ್ಷಕರು ಹಾಸನ ರವರ ಪತ್ರ ಸಂಖ್ಯೆ:ಡಿಎಸ್‌ಬಿ-5/ಹಾಸನ/107/2023 ದಿನಾಂಕ:23/02/2023

*******

**ಪ್ರಸ್ತಾವನೆ:**

ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಾಗಿದ್ದು, ರಸ್ತೆಯಲ್ಲಿ ಸಂಚಾರ ದಟ್ಟಣೆಯನ್ನು ಸುಗಮಗೊಳಿಸುವ ದೃಷ್ಠಿಯಿಂದ ವಾಹನ ಸವಾರರ ವಾಹನಗಳನ್ನು ಕ್ರಮಬದ್ಧವಾಗಿ ನಿಗಧಿತ ಸ್ಥಳದಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುವ ಮತ್ತು ನಿರ್ಬಂಧಿತ ಸ್ಥಳಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡದಂತೆ ಪಾರ್ಕಿಂಗ್ ಮತ್ತು ನೋ ಪಾರ್ಕಿಂಗ್ ಆದೇಶವನ್ನು ಹೊರಡಿಸುವಂತೆ ಉಲ್ಲೇಖದವ್ವಯ ಕೋರಿರುತ್ತಾರೆ.

ಉಲ್ಲೇಖದ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಿದೆ. ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ವಾಹನ ನಿಲುಗಡೆ ಮತ್ತು ವಾಹನ ನಿಲುಗಡೆ ನಿಷೇಧಕ್ಕೆ ಸಂಬಂಧಪಟ್ಟಂತೆ ಮತ್ತು ಸುಗಮ ಸಂಚಾರ ವ್ಯವಸ್ಥೆಗೆ ಅವಕಾಶ ಕಲ್ಪಸಿಕೊಡುವ ಸಲುವಾಗಿ ಸಂಚಾರಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ***::ಆದೇಶ ಸಂಖ್ಯೆ:ಎಂಎಜಿ/921/2020-21. ,ದಿನಾಂಕ:30/05/2023::***

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **ಎಂ .ಎಸ್. ಅರ್ಚನಾ ,ಭಾ.ಆ.ಸೇ., ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ** ಆದ ನಾನು ಮೋಟಾರು ವಾಹನ ಕಾಯ್ದೆ 1988 ರ ಸೆಕ್ಷನ್ 115 ಹಾಗೂ 1989 ರ ನಿಯಮ 221ಎ(5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ ಮತ್ತು ವಾಹನ ನಿಲುಗಡೆ ನಿಷೇದಕ್ಕೆ ಸಂಬಂಧಪಟ್ಟಂತೆ ಮತ್ತು ಸುಗಮ ಸಂಚಾರ ವ್ಯವಸ್ಥೆಗೆ ಅವಕಾಶ ಕಲ್ಪಸಿಕೊಡುವ ಸಲುವಾಗಿ ಸಂಚಾರಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ **ಈ ಕೆಳಕಂಡಂತೆ ಆದೇಶಿಸಿರುತ್ತೇನೆ**.

- **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆ ನಿಷೇಧಿಸಿದೆ.**
-

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 01 | **ಚನ್ನರಾಯಪಟ್ಟಣ ನಗರದ ಸರ್ಕಾರಿ ಆಸ್ಪತ್ರೆ ಮುಂಭಾಗ ರಸ್ತೆಯ ಎರಡು ಬದಿ:-** ಸರ್ಕಾರಿ ಆಸ್ಪತ್ರೆಗೆ ಪ್ರತಿನಿತ್ಯ ನೂರಾರು ಜನರು ದ್ವಿಚಕ್ರ ಮತ್ತು ಇತರೆ ವಾಹನಗಳಲ್ಲಿ ಬರುವುದರಿಂದ ರಸ್ತೆಯ ಎರಡು ಬದಿಯಲ್ಲಿ ವಾಹನಗಳನ್ನು ಎಲ್ಲೆಂದರಲ್ಲಿ ಆಸ್ಪತ್ರೆ ಮುಂಭಾಗ ನಿಲ್ಲಿಸುತ್ತಿದ್ದು ಇದರಿಂದ ಸರ್ವಾಜನಿಕರು ಓಡಾಡಲು ತೊಂದರೆಯಾಗಿರುತ್ತದೆ.(ಮೈಸೂರು ರಸ್ತೆ ಆಸ್ಪತ್ರೆ ಸರ್ಕಲ್ ಹತ್ತಿರ) | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |
| 02 | **ಜಿ.ಎಂ.ರಸ್ತೆಯಲ್ಲಿರುವ ನ್ಯಾಯಾಧೀಶರ ವಸತಿ ಗೃಹದ ಮುಂಭಾಗ-** ಸಾರ್ವಜನಿಕರು ನ್ಯಾಯಾಧೀಶರ ವಸತಿ ಗೃಹದ ಮುಂಭಾಗ ಎಲ್ಲೆಂದರಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದು ನ್ಯಾಯಾಧೀಶರು ಓಡಾಡಲು ತೊಂದರೆ ಉಂಟಾಗಿರುತ್ತದೆ. | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |

| | | |
|---|---|---|
| 03 | **<u>ಹಳೆ ಬಸ್ ನಿಲ್ದಾಣ(ಕೆ.ಎಸ್.ಆರ್.ಟಿ.ಸಿ ಬಸ್ ನಿಲುಗಡೆ ಸ್ಥಳ ರಸ್ತೆಯ ಎರಡು ಭಾಗದಲ್ಲಿ)</u>–** ಈ ಸ್ಥಳಕ್ಕೆ ಪ್ರತಿ ನಿತ್ಯ ಬೆಂಗಳೂರು ಕಡೆಯಿಂದ ಮಂಗಳೂರಿಗೆ ಹೋಗುವ ನೂರಾರು ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಬಂದು ಹಳೆ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೋಗತ್ತಿದ್ದು, ಈ ಸ್ಥಳದಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ಲಲು ತೊಂದರೆಯಾಗುವಂತೆ ದ್ವಿಚಕ್ರ ವಾಹನ ಮತ್ತು ಆಟೋ ಚಾಲಕರು ವಾಹನಳನ್ನು ನಿಲ್ಲಿಸುತ್ತಿದ್ದು ಪ್ರಯಾಣಿಕರಿಗೆ ತೊಂದರೆಯಾಗಿರುತ್ತದೆ. | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |
| 04 | **<u>ಆಸ್ಪತ್ರೆ ಸರ್ಕಲ್</u>–** ಈ ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸಿರುವುದರಿಂದ ವಾಹನಗಳು ಸಂಚರಿಸಲು ಅನುಕೂಲವಾಗುವಂತೆ ಸರ್ಕಲ್‌ನಿಂದ ಸುತ್ತ 30 ಮೀಟರ್ ನೋಪಾರ್ಕಿಂಗ್ ಸ್ಥಳವೆಂದು ಆದೇಶ ಮಾಡಲು ಕೋರಿ. | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |
| 05 | **<u>ನವೋದಯ ಸರ್ಕಲ್</u>–** ಈ ಸರ್ಕಲ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಸಿರುವುದರಿಂದ ವಾಹನಗಳು ಸಂಚರಿಸಲು ಅನುಕೂಲವಾಗುವಂತೆ ಸರ್ಕಲ್‌ನಿಂದ ಸುತ್ತ 30 ಮೀಟರ್ ನೋಪಾರ್ಕಿಂಗ್ ಸ್ಥಳವೆಂದು ಆದೇಶ ಮಾಡಲು ಕೋರಿ. | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |
| 06 | **<u>ಕೆ.ಆರ್ ಸರ್ಕಲ್</u>–** ಸರ್ಕಲ್ ಸುತ್ತ ವಾಹನಗಳು ಸಂಚರಿಸಲು ಅನುಕೂಲವಾಗುವಂತೆ 30 ಮೀಟರ್ ನೋಪಾರ್ಕಿಂಗ್ ಸ್ಥಳವೆಂದು ಆದೇಶ ಮಾಡಲು ಕೋರಿ. | ಎಲ್ಲಾ ವಾಹನಗಳ ನಿಲುಗಡೆ ನಿಷೇಧ |

- **<u>ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಕೋರ್ಟ್ ಹತ್ತಿರದಿಂದ ಮಖಾನ್ ಕ್ರಾಸ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಹಾಸನ ಕಡೆಯಿಂದ ಚನ್ನರಾಯಪಟ್ಟಣ ಕಡೆಗೆ ರಸ್ತೆಯ ಎಡಭಾಗ)</u>**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಹಾದುಹೋಗುವ ಎನ್.ಹೆಚ್.75 ರಸ್ತೆಯ ಕೋರ್ಟ್ ಗೇಟ್ ನಿಂದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ವರಗೆ | 4 ಚಕ್ರ ವಾಹನಗಳಿಗೆ ಪಾರ್ಕಿಂಗ್ ಸುಮಾರು 400 ಮೀಟರ್ ಉದ್ದ |
| 2 | ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನಿಂದ ಕಾಂತರಾಜಪುರ ನಟರಾಜ್ ರವರ ಬಿಲ್ಡಿಂಗ್(ಚೌಡೇಶ್ವರಿ ಪೆಟ್ರೋಲ್ ಬಂಕ್ ಎದುರು ರಸ್ತೆ)ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 150 ಮೀಟರ್ ಉದ್ದ |
| 3 | ವೆಂಕಟೇಶ್ ರವರ ಖಾಲಿ ನಿವೇಶದ ಎದುರುನಿಂದ (ಚೌಡೇಶ್ವರಿ ಪೆಟ್ರೋಲ್ ಬಂಕ್ ಎದುರು) ಐ.ಸಿ.ಐ.ಸಿ.ಐ ಬ್ಯಾಂಕ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 200 ಮೀಟರ್ ಉದ್ದ |
| 4 | ಐ.ಸಿ.ಐ.ಸಿ.ಐ ಬ್ಯಾಂಕ್ ನಿಂದ ಬ್ಯಾಂಕ್ ಆಫ್ ಬರೋಡ ಬ್ಯಾಂಕ್ ವರಗೆ | ದ್ವಿಚಕ್ರವಾಹನಗಳ ನಿಲುಗಡೆಗಾಗಿ 200 ಮೀಟರ್ ಉದ್ದ |
| 5 | ಭಾರತ್ ಪೆಟ್ರೋಲ್ ಬಂಕ್(ಯೋಗೇಶ್ ಪೆಟ್ರೋಲ್ ಬಂಕ್) ನಿಂದ ಕೃತಿಕ ಲಾಡ್ಜ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 250 ಮೀಟರ್ |
| 6 | ಕೃತಿಕಾ ಲಾಡ್ಜ್ ನಿಂದ ಪಶು ಆಸ್ಪತ್ರೆ ಕಾಂಪೌಂಡ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 150 ಮೀಟರ್ ಉದ್ದ |
| 7 | ಮಾರ್ಕೆಟ್ ರಸ್ತೆಯಿಂದ(ಲಾಲ್ ಬಹದ್ದೂರು ಶಾಸ್ತ್ರಿ ರಸ್ತೆ) ಹೂವಿನ ಮಾರ್ಕೆಟ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ 100 ಮೀಟರ್ ಉದ್ದ |

| | | |
|---|---|---|
| 8 | ಹೂವಿನ ಮಾರ್ಕೆಟ್‌ನಿಂದ ರೇಣುಕಾಂಭ ರಸ್ತೆಯ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೮೦ ಮೀಟರ್ |
| 9 | ಐ.ಇ.ಓ ಕಚೇರಿಯಿಂದ ಮುತ್ತುರಾಯಪ್ಪ ದೇವಸ್ಥಾನದ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ 200 ಮೀಟರ್ ಉದ್ದ |
| 10 | ಮುತ್ತುರಾಯಪ್ಪ ದೇವಸ್ಥಾನದಿಂದ ಓರಿಯರ್ ಬೇಕರಿಯವರಗೆ | ದ್ವಿಚಕ್ರವಾಹನಗಳ ನಿಲುಗಡೆಗಾಗಿ ೮೦ ಮೀಟರ್ ಉದ್ದ |
| 11 | ನವೋದಯ ಸರ್ಕಲ್ ನಿಂದ ಕುಲುಮೆ ಕೃಷ್ಣಪ್ಪ ರವರ ಮನೆಯವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 250 ಮೀಟರ್ |
| 12 | ಕುಲುಮೆ ಕೃಷ್ಣಪ್ಪ ರವರ ಮನೆಯಿಂದ ಬಾಲಾಜಿ ಥಿಯೇಟರ್ ರಸ್ತೆ ತಿರುವಿನ ವರಗೆ | ದ್ವಿ ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 150 ಮೀಟರ್ |
| 13 | ಬಾಲಾಜಿ ಥಿಯೇಟರ್ ತಿರುವಿನಿಂದ ಸರೋವರ ಬಿರಿಯಾನಿ ಹೋಟೆಲ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 150 ಮೀಟರ್ ಉದ್ದ |
| 14 | ಸರೋವರ ಹೋಟೆಲ್ ನಿಂದ ಎಲ್.ಐ.ಸಿ ಕಚೇರಿಯ ವರಗೆ | ದ್ವಿಚಕ್ರವಾಹನಗಳ ನಿಲುಗಡೆಗಾಗಿ ಸುಮಾರು 200 ಮೀಟರ್ |
| 15 | ಗಣಪ ಬೇಕರಿಯಿಂದ ಅಮೃತ್‌ಬಾರ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ 75 ಮೀಟರ್ |
| 16 | ಅಮೃತ್‌ಬಾರ್ ನಿಂದ ಹೆಚ್.ಡಿ.ಎಫ್.ಸಿ ಬ್ಯಾಂಕ್ ವರಗೆ 4 ಚಕ್ರ | ವಾಹನಗಳ ನಿಲುಗಡೆಗಾಗಿ ಸುಮಾರು 200 ಮೀಟರ್ ಉದ್ದ |
| 17 | ಹೆಚ್.ಡಿ.ಎಫ್.ಸಿ ಬ್ಯಾಂಕ್‌ನಿಂದ ನಂದಗೋಕುಲ ಹೋಟೆಲ್ ವರಗೆ | 2 ಚಕ್ರ ವಾಹನಗಳ ನಿಲುಗಡೆಗಾಗಿ 250 ಮೀಟರ್ ಉದ್ದ |
| 18 | ನಂದಗೋಕುಲ ಹೋಟೆಲ್ ನಿಂದ ಭಾರತ್ ಪೆಟ್ರೋಲ್ ಬಂಕ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೩೦ ಮೀಟರ್ |
| 19 | ಗದ್ದೆಹಳ್ಳ ಭಾರತ್ ಪೆಟ್ರೋಲ್ ಬಂಕ್‌ನಿಂದ ಕರೀಗೌಡ ಸಾವಿತ್ರಮ್ಮ ಕಲ್ಯಾಣ ಮಂಟಪದ ವರಗೆ | ಭಾರಿ ವಾಹನಗಳ ನಿಲುಗಡೆಗಾಗಿ ಸೂಮಾರು 40 ಮೀಟರ್ ಉದ್ದ |

- **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಕೋರ್ಟ್ ಹತ್ತಿರದಿಂದ ಮಖಾನ್ ಕ್ರಾಸ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಹಾಸನ ಕಡೆಯಿಂದ ಚನ್ನರಾಯಪಟ್ಟಣ ಕಡೆಗೆ ರಸ್ತೆಯ ಬಲಭಾಗ)**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ವಾಸವಿ ಬಸ್ ನಿಲ್ದಾಣ ದಿಂದ ಎ.ಪಿ.ಎಂ.ಸಿ ಮಾರ್ಕೆಟ್ ಗೇಟ್ ವರಗೆ | ಭಾರಿ ವಾಹನಗಳ ನಿಲುಗಡೆ ಪ್ರದೇಶ. ಸುಮಾರು 200 ಮೇಟರ್ ಉದ್ದ |
| 2 | ಎ.ಪಿ.ಎಂ.ಸಿ ಮಾರ್ಕೆಟ್ ಗೇಟ್ ನಿಂದ ಬಲಮುರಿ ಗಣಪತಿ ದೇವಸ್ಥಾನಕ್ಕೆ ಹೋಗುವ ತಿರುವು ರಸ್ತೆಯ ವರಗೆ | ದ್ವಿಚಕ್ರ ವಾಹನ ನಿಲುಗಡೆಗಾಗಿ ಸುಮಾರು 150 ಮೀಟರ್ ಉದ್ದ |
| 3 | ಚೌಡೇಶ್ವರಿ ಪೆಟ್ರೋಲ್ ಬಂಕ್‌ನಿಂದ ಪ್ರಸನ್ನ ಗಣಪತಿ ದೇವಸ್ಥಾನ ತಿರುವು(ನಾಗಸಮುದ್ರ ರಸ್ತೆ ತಿರುವು) ವರಗೆ | 2 ಚಕ್ರ ವಾಹನಗಳ ನಿಲುಗಡೆಗಾಗಿ ಸೂಮಾರು 350 ಮೀಟರ್ ಉದ್ದ |
| 4 | ಗಿರೀಶ್ ಅಂಡ್ ಕೋ ಟ್ರೇಡರ್ಸ್ ರಿಂದ ರತ್ನ ಸ್ಟೋರ್ಸ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 250 ಮೀಟರ್ ಉದ್ದ |

| | | |
|---|---|---|
| 5 | ಆಂಜನೇಯ ದೇವಸಸ್ಥಾನದಿಂದ ಪುಟ್ಟಣ್ಣ ಏಜನ್ಸಿ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 70 ಮೀಟರ್ |
| 6 | ಬಸ್ ನಿಲ್ದಾಣದಿಂದ ಐ.ಬಿ ರಸ್ತೆ ತಿರುವು ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ 60 ಮೀಟರ್ |
| 7 | ನಗರ ಪೊಲೀಸ್ ಠಾಣೆಯಿಂದ ಕೆ.ಇ.ಬಿ ಕಚೇರಿ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 200 ಮೀಟರ್ |
| 8 | ನವೋದಯ ಕಾಲೇಜು ಹತ್ತಿರದಿಂದ ರೂಪಾಲಿ ಸ್ಟೋರ್ ವರಗೆ | 4 ಚಕ್ರವಾಹನಗಳಿಗಾಗಿ 450 ಮೀಟರ್ ಉದ್ದ |
| 9 | ರೂಪಾಲಿ ಸ್ಟೋರ್‌ನಿಂದ ಬ್ಯಾಂಕ್ ಅಫ್ ಬರೋಡ ಬ್ಯಾಂಕ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 75 ಮೀಟರ್ ಉದ್ದ |
| 10 | ಕಾಳೇನಹಳ್ಳಿ ತಿರುವಿನಿಂದ ಹೊಸಬಸ್‌ನಿಲ್ದಾಣದ ಒಳಗೆ ಹೋಗುವ ಗೇಟ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ 200 ಮೀಟರ್ ಉದ್ದ |
| 11 | ಹೊಸಬಸ್ ನಿಲ್ದಾಣದಿಂದ ಹೊರಗೆ ಹೋಗುವ ಗೇಟ್ ನಿಂದ ಧನಲಕ್ಷ್ಮಿ ಥಿಯೇಟರ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮರು 450 ಮೀಟರ್ ಉದ್ದ |
| 12 | ಧನಲಕ್ಷ್ಮೀ ಥಿಯೇಟರ್ ನಿಂದ ಗೋ ಗ್ಯಾಸ್ ಬಂಕ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 350 ಮೀಟರ್ ಉದ್ದ |
| 13 | ಗೋ ಗ್ಯಾಸ್ ಬಂಕ್‌ನಿಂದ ಮಖಾನ್ ಕ್ರಾಸ್ ವರಗೆ | ಲಾರಿ ಮತ್ತು ಟ್ರಾಕ್ಟರ್ ನಿಲುಗಡೆಗಾಗಿ ಸುಮಾರು 90 ಮೀಟರ್ |

- **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬಾಗೂರು ರಸ್ತೆ ಕೆ.ಆರ್.ಸರ್ಕಲ್ ನಿಂದ ನಯರ ಪೆಟ್ರೋಲ್ ಬಂಕ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಬಾಗೂರು ಕಡೆಯಿಂದ ಚನ್ನರಾಯಪಟ್ಟಣ ಕಡೆಗೆ ರಸ್ತೆಯ ಎಡಭಾಗ–ಪಶ್ಚಿಮಕ್ಕೆ)**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ಸುಜಾತ ಕಾಫಿ ವರ್ಕ್ಸ್ ನಿಂದ ರಾಮಕೃಷ್ಣ ಸ್ಟೋರ್ ವರಗೆ | ದ್ವಿ ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 60 ಮೀಟರ್ ಉದ್ದ |
| 2 | ರಾಮಕೃಷ್ಣ ಸ್ಟೋರ್ ನಿಂದ ಅರಳೇಪೇಟೆ ಸರ್ಕಲ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 400 ಮೀಟರ್ ಉದ್ದ |
| 3 | ಅರಳೆಪೇಟೆ ಸರ್ಕಲ್ ನಿಂದ ಶನಿದೇವರ ದೇವಸ್ಥಾನ ಮುಖ್ಯ ದ್ವಾರ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 250 ಮೀಟರ್ ಉದ್ದ |
| 4 | ಶನಿದೇವರ ದೇವಸ್ಥಾನ ಮುಖ್ಯ ದ್ವಾರದಿಂದ ಅರಳಮರ ಸರ್ಕಲ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 400 ಮೀಟರ್ ಉದ್ದ |
| 5 | ಅರಳಮರ ಸರ್ಕಲ್ ನಿಂದ ನಯರಾ ಪೆಟ್ರೋಲ್ ಬಂಕ್ ಗೂರುಮಾರನಹಳ್ಳಿ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 500 ಮೀಟರ್ ಉದ್ದ |

- **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಬಾಗೂರು ರಸ್ತೆ ಕೆ.ಆರ್.ಸರ್ಕಲ್ ನಿಂದ ನಯರ ಪೆಟ್ರೋಲ್ ಬಂಕ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಬಾಗೂರು ಕಡೆಯಿಂದ ಚನ್ನರಾಯಪಟ್ಟಣ ಕಡೆಗೆ ರಸ್ತೆಯ ಬಲಭಾಗ–ಪೂರ್ವಕ್ಕೆ)**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ಸಂಗೀತಾ ಗಾರ್ಮೆಂಟ್ಸ್ ನಿಂದ ಬೆಣ್ಣೆರಾಜಪ್ಪ ಬಿಲ್ಡಿಂಗ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೩೦೦ ಮೀಟರ್ ಉದ್ದ |
| 2 | ಬೆಣ್ಣೆರಾಜಪ್ಪ ಬಿಲ್ಡಿಂಗ್ ನಿಂದ ಅರಳೆಪೇಟೆ ಸರ್ಕಲ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೩೦೦ ಮೀಟರ್ ಉದ್ದ |
| ೩ | ಕನ್ನಿಕಪರಮೇಶ್ವರಿ ದೇವಸ್ಥಾನದಿಂದ ಟಿಪ್ಪು ಸರ್ಕಲ್ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೩೨೦ ಮೀಟರ್ ಉದ್ದ |
| 4 | ಟಿಪ್ಪು ಸರ್ಕಲ್ ನಿಂದ ಗೂರುಮಾರನಹಳ್ಳಿ ನಯರಾ ಪೆಟ್ರೋಲ್ ಬಂಕ್ ವರಗೆ. | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೫೦೦ ಮೀಟರ್ ಉದ್ದ |

➢ **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಮೈಸೂರು ರಸ್ತೆ ನವೋದಯ ಕಾಲೇಜು ಹತ್ತಿರದಿಂದ ಅಂಬೇಡ್ಕರ್ ಸರ್ಕಲ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಚನ್ನರಾಯಪಟ್ಟಣ ಕಡೆಯಿಂದ ಮೈಸೂರು ಕಡೆಗೆ ರಸ್ತೆಯ ಎಡಭಾಗ)**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ನವೋದಯ ಕಾಲೇಜು ಗೇಟ್ ಹತ್ತಿರ ದಿಂದ ನಾಗೇಶ್ ಆಸ್ಪತ್ರೆಯ ವರಗೆ | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೨೦೦ ಮೀಟರ್ ಉದ್ದ |
| 2 | ನಾಗೇಶ್ ಆಸ್ಪತ್ರೆಯಿಂದ ವಿನಾಯಕ ಸ್ಪರ್ಶ ಆಸ್ಪತ್ರೆಯ ವರಗೆ | 4 ಚಕ್ರದ ವಾಹನಗಳ ನಿಲುಗಡೆಗಾಗಿ ಸುಮಾರು ೪೦೦ ಮೀಟರ್ ಉದ್ದ |
| ೩ | ವಿನಾಯಕ ಸ್ಪರ್ಶ ಆಸ್ಪತ್ರೆಯಿಂದ ಬಜಾಜ್ ಬೈಕ್ ಶೋರೂಂ ವರಗೆ | ದ್ವಿಚಕ್ರ ವಾಹನ ನಿಲುಗಡೆಗಾಗಿ ಸುಮಾರು ೨೦೦ ಮೀಟರ್‌ಉದ್ದ |
| 4 | ಸವಿತ ಶಿವನಂಜೇಗೌಡ ಕಲ್ಯಾಣ ಮಂಟಪದಿಂದ ಅಂಬೇಡ್ಕರ್ ಸರ್ಕಲ್ ವರಗೆ ರಸ್ತೆಯ ಎಡಬದಿಯಲ್ಲಿ(ಪೂರ್ವಕ್ಕೆ) | ದ್ವಿಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 1 ಕಿಮೀ ಉದ್ದ |

➢ **ಚನ್ನರಾಯಪಟ್ಟಣ ಸಂಚಾರ ಪೊಲೀಸ್ ಠಾಣಾ ಸರಹದ್ದಿನ ಮೈಸೂರು ರಸ್ತೆ ನವೋದಯ ಕಾಲೇಜು ಹತ್ತಿರದಿಂದ ಅಂಬೇಡ್ಕರ್ ಸರ್ಕಲ್ ವರಗೆ ಈ ಕೆಳಕಂಡ ಸ್ಥಳಗಳಲ್ಲಿ ವಾಹನ ನಿಲುಗಡೆಗೆ ಅನಮತಿ ನೀಡಿದೆ. (ಚನ್ನರಾಯಪಟ್ಟಣ ಕಡೆಯಿಂದ ಮೈಸೂರು ಕಡೆಗೆ ರಸ್ತೆಯ ಬಲಭಾಗ)**

| ಕ್ರ.ಸಂ | ವಿವರ | ವಾಹನಗಳ ವಿಧ |
|---|---|---|
| 1 | ನವೋದಯ ಕಾಲೇಜು ಹತ್ತಿರದಿಂದ ಚುಂಚನಗಿರಿ ಕಲ್ಯಾಣ ಮಂಟಪದ ವರಗೆ | 4 ಚಕ್ರ ವಾಹನ ನಿಲುಗಡೆಗಾಗಿ 450 ಮೀಟರ್ |
| 2 | ಚುಂಚನಗಿರಿ ಕಲ್ಯಾಣ ಮಂಟಪದಿಂದ ಸಹಕಾರ ಬ್ಯಾಂಕ್ ವರಗೆ | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು ೩೦೦ ಮೀಟರ್ ಉದ್ದ |
| ೩ | ಪನರ್ವಿಕ ಶೋರೂಂ ನಿಂದ' ಅಂಬೇಡ್ಕರ್ ಸರ್ಕಲ್ ವರಗೆ ರಸ್ತೆಯ ಬಲಬದಿಯಲ್ಲಿ (ಪಶ್ಚಿಮಕ್ಕೆ) | 4 ಚಕ್ರ ವಾಹನಗಳ ನಿಲುಗಡೆಗಾಗಿ ಸುಮಾರು 1 ಕಿಮೀ ಉದ್ದ |

–ಸಹಿ–
(ಎಂ. ಎಸ್. ಅರ್ಚನಾ, ಭಾ.ಆ.ಸೇ.,)
**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,**
**ಹಾಸನ ಜಿಲ್ಲೆ, ಹಾಸನ.**

**PR-100**

ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ,
ಹಾಸನ ಜಿಲ್ಲೆ, ಹಾಸನ-573201.

ಕರ್ನಾಟಕ ಸರ್ಕಾರ

ಕಛೇರಿ : 08172-267345
265028, 253354
ನಿವಾಸ : 08172-268202
ಫ್ಯಾಕ್ಸ್ : 08172-265418
E-Mail: deo.hassan@gmail.com
Website:www.hassan-nic.in

ವಿಷಯ: ಹೊಳೆನರಸೀಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪೇಟೆ ಬೀದಿ ಮತ್ತು ಕೋಟೆ ರಸ್ತೆಗಳಲ್ಲಿ ವಾಹನ ನಿಲುಗಡೆ ಸಂಬಂಧ ಆದೇಶವನ್ನು ಹೊರಡಿಸುವಂತೆ ಕೋರಿರುವ ಬಗ್ಗೆ.

ಉಲ್ಲೇಖ: ಪೊಲೀಸ್ ಅಧೀಕ್ಷಕರು ಹಾಸನ ರವರ ಪತ್ರ ಸಂಖ್ಯೆ:ಡಿಎಸ್‌ಬಿ-5/ಹಾಸನ/123/2023 ದಿನಾಂಕ:02/03/2023

*******

**ಪ್ರಸ್ತಾವನೆ:**

ಹೊಳೆನರಸೀಪುರ ನಗರವು ಪುರಸಭೆ ವ್ಯಾಪ್ತಿಯನ್ನು ಹೊಂದಿದ್ದು ಹೊಳೆನರಸಿಪುರ ಟೌನ್ ಮದ್ಯದಲ್ಲಿ ಎನ್‌ಹೆಚ್ 373 ರಾಷ್ಟ್ರೀಯ ಹೆದ್ದಾರಿ ಮತ್ತು ಎಸ್ ಹೆಚ್ 08 ರಾಜ್ಯ ಹೆದ್ದಾರಿಗಳು ಪಟ್ಟಣದ ಹೃದಯ ಭಾಗದಲ್ಲಿ ಹಾದು ಹೋಗಿದ್ದು ದಿನ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ ಹಾಗೆ ಸಂಚರಿಸುವ ವಾಹನಗಳಲ್ಲಿ ಬರುವ ಸಾರ್ವಜನಿಕರು ಮತ್ತು ಸ್ಥಳೀಯರುಗಳು ಪೇಟೆ ಬೀದಿ ಮತ್ತು ಕೋಟೆ ಬೀದಿಗಳಲ್ಲಿ ಚಿನ್ನಬೆಳ್ಳಿ ಅಂಗಡಿಗಳು, ಬಟ್ಟೆ ಅಂಗಡಿಗಳು, ಹಾರ್ಡವೇರ್ ಅಂಗಡಿಗಳು, ಮೆಡಿಕಲ್ ಶಾಪ್ ಗಳು, ದಿನಸಿ ಅಂಗಡಿಗಳು, ಬೇಕರಿಗಳು, ಮತ್ತು ಹೋಟೆಲ್‌ಗಳಿರುವುದರಿಂದ ಜನ ಜಂಗುಳಿ ಹೆಚ್ಚಾಗಿರುತ್ತದೆ, ಇದರೊಂದಿಗೆ ವಾಹನಗಳ ಸಂಚಾರವು ಕೂಡ ಹೆಚ್ಚಾಗಿರುವುದರಿಂದ ಪೇಟೆ ಬೀದಿ ರಸ್ತೆ ಮತ್ತು ಕೋಟೆ ಬೀದಿ ರಸ್ತೆಗಳು ಕಿರಿದಾಗಿದ್ದು ಮತ್ತು ಚಿಕ್ಕದಾಗಿರುವುದರಿಂದ ವಾಹನಗಳನ್ನು ಎಲ್ಲೆಂದರಲ್ಲಿ ಅಲ್ಲಿ ರಸ್ತೆಯ ಎರಡು ಬದಿಯಲ್ಲು ವಾಹನಗಳನ್ನು ನಿಲ್ಲಿಸುವುದರಿಂದ ಟ್ರಾಫೀಕ್ ಸಮಸ್ಯೆ ಉಂಟಾಗುತ್ತಿದ್ದು ಇದರಿಂದ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನಾನುಕೂಲವಾಗುತ್ತಿದ್ದು ಸಾರ್ವಜನಿಕರಿಗೆ ಆಗುತ್ತಿರುವ ಅನಾನೂಕೂಲವನ್ನು ತಪ್ಪಿಸಲು ಮತ್ತು ಸುಗಮ ಸಂಚಾರದ ದೃಷ್ಠಿಯಿಂದ ದ್ವಿಚಕ್ರ, ತ್ರಿ ಚಕ್ರ, ನಾಲ್ಕು ಚಕ್ರ ವಾಹನಗಳ ಪಾರ್ಕಿಂಗ್ ಸಂಬಂಧ ಆದೇಶವನ್ನು ಹೊರಡಿಸುವಂತೆ ಬಗ್ಗೆ ಉಲ್ಲೇಖದನ್ವಯ ಕೋರಿರುತ್ತಾರೆ.

ಉಲ್ಲೇಖದ ಪತ್ರದಲ್ಲಿನ ಅಂಶಗಳನ್ನು ಪರಿಶೀಲಿಸಿದೆ. ಹೊಳೆನರಸೀಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪೇಟೆ ಬೀದಿ ಮತ್ತು ಕೋಟೆ ರಸ್ತೆ ವ್ಯಾಪ್ತಿಯಲ್ಲಿರುವ ವಾಹನ ನಿಲುಗಡೆ ಸಂಬಂಧಪಟ್ಟಂತೆ ಮತ್ತು ಸುಗಮ ಸಂಚಾರ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡುವ ಸಲುವಾಗಿ ಸಂಚಾರಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ***::ಆದೇಶ ಸಂಖ್ಯೆ:ಎಂಎಜಿ/921/2020-21. ,ದಿನಾಂಕ:30/05/2023::***

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **ಎಂ .ಎಸ್. ಅರ್ಚನಾ ,ಭಾ.ಆ.ಸೇ., ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಹಾಸನ ಜಿಲ್ಲೆ, ಹಾಸನ** ಆದ ನಾನು ಮೋಟಾರು ವಾಹನ ಕಾಯ್ದೆ 1988 ರ ಸೆಕ್ಷನ್ 115 ಹಾಗೂ 1989 ರ ನಿಯಮ 221ಎ(5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊಳೆನರಸೀಪುರ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಪೇಟೆ ಬೀದಿ ಮತ್ತು ಕೋಟೆ ರಸ್ತೆ ವ್ಯಾಪ್ತಿಯಲ್ಲಿ ವಾಹನ ನಿಲುಗಡೆ ಸಂಬಂಧಪಟ್ಟಂತೆ ಮತ್ತು ಸುಗಮ ಸಂಚಾರ ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡುವ ಸಲುವಾಗಿ ಸಂಚಾರಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರಲು ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

- **ಹೊಳೆನರಸೀಪುರ ನಗರದಲ್ಲಿ ವಾರದ ದಿನಗಳಲ್ಲಿ ಕ್ರಮಬದ್ಧವಾಗಿ ವಾಹನಗಳನ್ನು ಈ ಕೆಳಕಂಡ ಸ್ಥಳದಲ್ಲಿ ನಮೂದಿಸಿರುವ ದಿನಗಳಂದು ವಾಹನಗಳ ಪಾರ್ಕಿಂಗ್ ಮಾಡಲು ತಿಳಿಸಿದೆ.**

| ಕ್ರ ಸಂ | ಸ್ಥಳದ ಹೆಸರು | ವಾರದ ದಿನಗಳು |
|---|---|---|
| 1 | ಪೇಟೆ ಬೀದಿ ಪಶ್ಚಿಮ ದಿಕ್ಕಿನ ಕಡೆಗೆ (ಸ್ವಾಗತ್ ಸರ್ಕಲ್ ನಿಂದ ಚೆನ್ನಾಂಭಿಕ ಸರ್ಕಲ್ ವರೆಗೆ) | ಭಾನುವಾರ<br>ಮಂಗಳವಾರ<br>ಗುರುವಾರ |
| 2 | ಪೇಟೆ ಬೀದಿ ಪೂರ್ವ ದಿಕ್ಕಿನ ಕಡೆಗೆ (ಸ್ವಾಗತ್ ಸರ್ಕಲ್ ನಿಂದ ಚೆನ್ನಾಂಭಿಕ ಸರ್ಕಲ್ ವರೆಗೆ) | ಸೋಮವಾರ<br>ಬುಧವಾರ<br>ಶುಕ್ರವಾರ<br>ಶನಿವಾರ |
| 3 | ಕೋಟೆ ರಸ್ತೆಯ ಪೂರ್ವ ದಿಕ್ಕಿನ ಕಡೆಗೆ (ಗಾಂಧಿ ಸರ್ಕಲ್ ನಿಂದ ಎಸ್‌ಎಲ್‌ಎನ್ ದೇವಸ್ಥಾನದ ವರೆಗೆ) | ಭಾನುವಾರ<br>ಮಂಗಳವಾರ<br>ಗುರುವಾರ |

| | | |
|---|---|---|
| 4 | ಕೋಟೆ ರಸ್ತೆಯ ಪಶ್ಚಿಮ ದಿಕ್ಕಿನ ಕಡೆಗೆ (ಗಾಂಧಿ ಸರ್ಕಲ್ ನಿಂದ ಎಸ್‌ಎಲ್‌ಎನ್ ದೇವಸ್ಥಾನದ ವರೆಗೆ) | ಸೋಮವಾರ<br>ಬುಧವಾರ<br>ಶುಕ್ರವಾರ<br>ಶನಿವಾರ |

–ಸಹಿ–
(ಎಂ. ಎಸ್. ಅರ್ಚನಾ, ಭಾ.ಆ.ಸೇ.,)
**ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,**
**ಹಾಸನ ಜಿಲ್ಲೆ, ಹಾಸನ.**

## PR-101

**ಅಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,**
**ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನ್ಯಾಯಾಲಯ**

**ದಿನಾಂಕ : 18.04.2023**

**ಉಪಸ್ಥಿತರು :: ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,**
**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು**
**ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.**

**ರಾಮಾಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ : 08/2009 ದಿನಾಂಕ: 20.01.2009.**

**ಫಿರ್ಯಾದುದಾರರು ::** **ಪೊಲೀಸ್ ಉಪ ನಿರೀಕ್ಷಕರು,**
ಕಾನೂನು ಮತ್ತು ಸುವ್ಯವಸ್ಥೆ ವಿಭಾಗ,
ರಾಮಾಪುರ ಪೊಲೀಸ್ ಠಾಣೆ, ರಾಮಾಪುರ.

**ವಿರುದ್ಧ**

**ಆರೋಪಿ** :: **ಶ್ರೀ. ಮಹಾಲಿಂಗ ಬಿನ್ ಗುರುಸ್ವಾಮಿ,**
ಅಂಚೀಪಾಳ್ಯ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು.

**ಶ್ರೀ. ಸೆಲ್ವ ಆಲಿಯಾಸ್ ಕುಮಾರ**
ನಲ್ಲೂರು ಗ್ರಾಮ,
ಕೊಳ್ಳೇಗಾಲ ತಾಲ್ಲೂಕು.

**ಅರ್ಜಿದಾರರು** :: **ಶ್ರೀ. ಕೆ. ತಂಗವೇಲು ಬಿನ್ ಕೊಳಂದೈಸ್ವಾಮಿ,**
# 2/5–515,
ಕರಂಗಲ್ಲೂರು ಗ್ರಾಮ,
ಮೇಟೂರು ತಾಲ್ಲೂಕು,
ಸೇಲಂ ಜಿಲ್ಲೆ. ತಮಿಳುನಾಡು.
ಜಿ.ಪಿ.ಎ. ಹೋಲ್ಡರ್ ಎನ್. ವೇಲುಸ್ವಾಮಿ ಬಿನ್ ಮುನಿಸ್ವಾಮಿ,
ನಲ್ಲೂರು ಗ್ರಾಮ, ಕೊಳ್ಳೇಗಾಲ ತಾಲ್ಲೂಕು.

**1963 ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 71(ಎ) r/w ಸೆಕ್ಷನ್ 63 ರ ಅಡಿಯಲ್ಲಿ ನಡಾವಳಿಗಳು**

**"ಅಂತಿಮ ಆದೇಶ"**

ರಾಮಾಪುರ ಪೊಲೀಸ್ ಠಾಣಾ ಪಿ.ಎಸ್.ಐ ಹೆಚ್. ಕೆ.ಶಿವಸ್ವಾಮಿ ಮತ್ತು ಸಿಬ್ಬಂದಿಗಳಾದ ಪಿ.ಸಿ.–378 ನಾಗರಾಜು ಮತ್ತು ಪಿ.ಸಿ.–428 ಬಸವಣ್ಣ ಇವರುಗಳು ಇಲಾಖಾ ಜೀಪು ಸಂಖ್ಯೆ: ಕೆಎ–10–ಜಿ–133 ರಲ್ಲಿ ದಿನಾಂಕ: 19.01.2009 ರಂದು ರಾತ್ರಿ ಗಸ್ತು ಮುಗಿಸಿಕೊಂಡು ನಾಲ್‌ರೋಡ್ ಉಪ ಠಾಣಾ ಬಳಿ ಹೋಗಿ ಅಲ್ಲಿ ಕರ್ತವ್ಯದಲ್ಲಿದ್ದ

ಪಿಸಿ–176 ಮಹದೇವಸ್ವಾಮಿ ಮತ್ತು ಪಿ.ಸಿ–305 ಗೌರೀಶ ಇವರುಗಳ ಜೊತೆ ವಾಹನಗಳನ್ನು ತಪಾಸಣೆ ಮಾಡುತ್ತಿದ್ದಾಗ ದಿನಾಂಕ: 20.01.2009 ರ ಬೆಳಿಗ್ಗೆ 04:15 ಗಂಟೆ ಸಮಯದಲ್ಲಿ ನಲ್ಲೂರು ಕಡೆಯಿಂದ ತಮಿಳುನಾಡು ಕಡೆಗೆ ಹೋಗಲು ಬಂದ ಒಂದು ಮಿನಿ ಗೂಡ್ಸ್ ಲಾರಿ **(ಸಂಖ್ಯೆ: TN-72-Z-2799)** ಯನ್ನು ತಡೆದು ನಿಲ್ಲಿಸಿದಾಗ ಲಾರಿ ಚಾಲಕ ಲಾರಿಯಿಂದ ಇಳಿದು ಓಡಿಹೋಗಿರುತ್ತಾನೆ. ಪೊಲೀಸ್ ಇಲಾಖಾ ಸಿಬ್ಬಂದಿಗಳು ಲಾರಿಯನ್ನು ತಪಾಸಣೆ ನಡೆಸಿದಾಗ ಲಾರಿಯ ಒಳಗಡೆ ಇದ್ದ ಒಬ್ಬ ಆಸಾಮಿಯನ್ನು ವಶಕ್ಕೆ ತೆಗೆದುಕೊಂಡು ವಿಚಾರಿಸಲಾಗಿ ಲಾರಿಯಲ್ಲಿ ಜೋಳದ ಮೂಟೆಗಳನ್ನು ಸಾಗಿಸುತ್ತಿರುವುದಾಗಿ ತಿಳಿಸಿದನೆಂದು ಪಿ.ಎಸ್.ಐ ಹಾಗೂ ಸಿಬ್ಬಂದಿಯವರುಗಳು ಮೂಟೆಗಳಿಗೆ ಹೊದಿಸಿದ್ದ ಬಿಳಿ ಪ್ಲಾಸ್ಟಿಕ್ ಚೀಲದ ಟಾರ್ಪಲ್‌ನ್ನು ಬಿಚ್ಚಿ ನೋಡಿದಾಗ ಲಾರಿಯ ಒಳಗೆ 26 ಕಗ್ಗಲಿ ಜಾತಿಯ ಮರದ ತುಂಡುಗಳು (ಬಿಲೆಟ್ಸ್) ಮತ್ತು 56 ಸಂಖ್ಯೆ ಗೋಣಿ ಚೀಲದಲ್ಲಿ ಸಣ್ಣ ಸಣ್ಣ ತುಂಡುಗಳು ಹಾಗೂ ಚೆಕ್ಕೆಗಳು ತುಂಬಿದ್ದು ಕಂಡುಬಂದಿರುತ್ತದೆ. ಲಾರಿಯಲ್ಲಿದ್ದ ಆಸಾಮಿಯನ್ನು ವಿಚಾರಿಸಲಾಗಿ ಮಹಾಲಿಂಗ ಬಿನ್ ಗುರುಸ್ವಾಮಿ, 30 ವರ್ಷ ವಯಸ್ಸು, ಪಡಿಯಾಚ್ಚಿ ಜನಾಂಗ, ಅಂಚೀಪಾಳ್ಯ ಗ್ರಾಮ, ಕೊಳ್ಳೇಗಾಲ ತಾಲ್ಲೂಕು ಎಂಬುದಾಗಿ ವಿಚಾರಣಾ ಸಮಯದಲ್ಲಿ ತಿಳಿಸಿರುತ್ತಾನೆ. ಲಾರಿಯಿಂದ ಇಳಿದು ಓಡಿಹೋದ ಲಾರಿ ಡ್ರೈವರ್ ಸೆಲ್ವ ಆಲಿಯಾಸ್ ಕುಮಾರ ಬಿನ್ ಮುನಿಸ್ವಾಮಿ, ಪಡಿಯಾಚ್ಚಿ ಜನಾಂಗ, ಅಂಚೀಪಾಳ್ಯ ಗ್ರಾಮ, ಕೊಳ್ಳೇಗಾಲ ತಾಲ್ಲೂಕು ಎಂಬುದಾಗಿ ತಿಳಿದುಬಂದಿರುತ್ತದೆ. ಪೊಲೀಸ್ ಇಲಾಖಾ ಸಿಬ್ಬಂದಿಗಳು ಲಾರಿ ಮತ್ತು ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 62, 71(ಎ) ರಡಿಯಲ್ಲಿ ಪ್ರಕರಣ ದಾಖಲಿಸಿ 1). ಮಿನಿ ಗೂಡ್ಸ್ ಲಾರಿ **ಸಂಖ್ಯೆ: TN-72-Z-2799,** 2). 26 ಕಗ್ಗಲಿ ಮರದ ತುಂಡುಗಳು (ಬಿಲೆಟ್ಸ್), 3). ಕಗ್ಗಲಿ ಮರದ ಸಣ್ಣ ಸಣ್ಣ ತುಂಡುಗಳು ಹಾಗೂ ಚೆಕ್ಕೆಗಳು ತುಂಬಿದ 56 ಗೋಣಿ ಚೀಲಗಳು, 4). ಒಂದು ಬಿಳಿ ಪ್ಲಾಸ್ಟಿಕ್ ಚೀಲದ ಟಾರ್ಪಲ್, 5). ಲಾರಿಗೆ ಬಿಗಿದಿದ್ದ ಒಂದು ಹಗ್ಗ, ಇವುಗಳನ್ನು ಮುಂದಿನ ಕ್ರಮಕ್ಕಾಗಿ ದಿನಾಂಕ: 27.01.2009 ರಂದು ಈ ಕೆಳಸಹಿದಾರರ ಸಮ್ಮುಖದಲ್ಲಿ ಹಾಜರುಪಡಿಸಿರುತ್ತಾರೆ.

ವಾಹನದ ಮಾಲೀಕರಾದ ಶ್ರೀ. ತಂಗವೇಲು ಬಿನ್ ಕೊಳಂದೈಸ್ವಾಮಿ ಇವರ ಪರ ವಕೀಲರು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಕಲಂ 457 ರಡಿಯಲ್ಲಿ ವಾಹನವನ್ನು ಮಧ್ಯಂತರ ಸುಪರ್ದಿಗೆ ನೀಡಲು ಕೋರಿ ದಿನಾಂಕ: 26.03.2010 ರಂದು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯ ಸಾರಾಂಶ ಈ ಕೆಳಕಂಡಂತಿರುತ್ತದೆ.

ದಿನಾಂಕ: 19.01.2009 ರ ರಾತ್ರಿಯಲ್ಲಿ **TN-72-Z-2799** ರ ವಾಹನವು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ಲಾರಿಯಲ್ಲಿ ಸಣ್ಣ ಸಣ್ಣ ತುಂಡುಗಳನ್ನು ಹಾಗೂ ಚೆಕ್ಕೆಗಳನ್ನು ಗೋಣಿ ಚೀಲಗಳಲ್ಲಿ ಹಾಕಿಕೊಂಡು ತಮಿಳುನಾಡಿಗೆ ಸಾಗಾಣಿಕೆ ಮಾಡುತ್ತಿದ್ದರು. ಸದರಿ ವೇಳೆಯಲ್ಲಿ ಪೊಲೀಸರು ವಾಹನವನ್ನು ತಪಾಸಣೆ ಮಾಡಿದಾಗ ಸದರಿ ಲಾರಿಯಲ್ಲಿದ್ದ ಗೋಣಿ ಚೀಲದಲ್ಲಿದ್ದ ಕಗ್ಗಲಿ ಮರದ ತುಂಡುಗಳು ಇರುವುದಾಗಿ ಆರೋಪವನ್ನು ಮಾಡಿ ಫಿರ್ಯಾದನ್ನು ಸಲ್ಲಿರುತ್ತಾರೆ. ಸದರಿ ಫಿರ್ಯಾದಿನ ಅನ್ವಯ ರಾಮಾಪುರ ಪೊಲೀಸ್ ಠಾಣೆ ಅಧಿಕಾರಿಗಳು ಸಿ.ಆರ್. ನಂ. 08/2009 ರಂತೆ ಕೇಸು ದಾಖಲಿಸಿಕೊಂಡು ಆರೋಪಿಗಳ ಮೇಲೆ ಕಲಂ 62, 71ಎ ರೀತ್ಯ ಅರಣ್ಯ ಕಾಯ್ದೆ ಅಡಿ ಕೇಸನ್ನು ದಾಖಲಿಸಿ ಸದರಿ ಪ್ರಕರಣದಲ್ಲಿ ವಾಹನವನ್ನು ಅಮಾನತ್ತು ಪಡಿಸಿ ಕೊಂಡಿರುತ್ತಾರೆ. ಸದರಿ ವಾಹನದ ಪಿ.ಎಫ್. ಸಂಖ್ಯೆ: 10/2009 ಆಗಿರುತ್ತದೆ.

**ಕಾರಣಗಳು**

1. ಈ ತಕರಾರಿನ ಜೊತೆ ಎಫ್.ಐ.ಆರ್. ಹಾಗೂ ಮಹಜರನ್ನು ಸಹ ತಕರಾರಿನ ಒಂದು ಭಾಗವಾಗಿ ಪರಿಗಣಿಸಿದೆ.

2. ರಾಮಾಪುರ ಪೊಲೀಸ್ ಇನ್ಸ್‌ಪೆಕ್ಟರ್‌ರವರು ದಿನಾಂಕ: 19.04.2009 ರಂದು ರಾತ್ರಿ ಪಿ.ಎಸ್.ಐ. ಹಾಗೂ ಸಿಬ್ಬಂದಿಗಳೊಂದಿಗೆ ಇಲಾಖಾ ಜೀಪ್ ಸಂಖ್ಯೆ: ಕೆಎ–10–ಜಿ–133 ರಲ್ಲಿ ನಾಲಾ ರಸ್ತೆ ಉಪ ಠಾಣಾ ಬಳಿ ಗಸ್ತು ಮಾಡುತ್ತಿರುವಾಗ ಬೆಳಗಿನ ಜಾವ 04:15 ಗಂಟೆ ಸಮಯದಲ್ಲಿ ನಲ್ಲೂರು ಕಡೆಯಿಂದ ತಮಿಳುನಾಡು ಕಡೆಗೆ ಬರುತ್ತಿದ್ದ ಮಿನಿ ಗೂಡ್ಸ್ ಲಾರಿಯನ್ನು ತಡೆದು ಚೆಕ್ ಮಾಡಲಾಗಿ ಆರೋಪಿಗಳು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ 26 ಕಗ್ಗಲಿ ಮರದ ತುಂಡುಗಳು ಹಾಗೂ 56 ಚೀಲದಲ್ಲಿ ಸಣ್ಣ ಕಗ್ಗಲಿ ಮರದ ತುಂಡುಗಳು ಹಾಗೂ ಚೆಕ್ಕೆಗಳು ಇದ್ದವೆಂದು ಅವುಗಳ ಮೌಲ್ಯ 1,50,000/– ರೂ. ಗಳೆಂದು ತಿಳಿಸಿರುತ್ತಾರೆ. ನಂತರ ಸ್ಥಳದಲ್ಲಿ ಮಹಜರ್ ಮಾಡಿ ವಾಹನ ಹಾಗೂ ಮಾಲುಗಳನ್ನು ಅಮಾನತ್ತುಪಡಿಸಿ ವಾಹನದಲ್ಲಿದ್ದ ಮಹಾಲಿಂಗ ಎಂಬುವವರನ್ನು ದಸ್ತಗಿರಿ ಮಾಡಿ ಆರೋಪಿತರ ವಿರುದ್ಧ ಕಲಂ 62, 71 (ಎ) ಕೆ.ಎಫ್. ಆಕ್ಟ್ ಮೇರೆಗೆ ಪ್ರಕರಣ ನೋಂದಣಿ ಆಗಿರುತ್ತದೆ. ಆದುದರಿಂದ ಅರಣ್ಯ ಅಪರಾಧವು ನಡೆದಿರುವುದು ಸಾಬೀತಾಗಿರುತ್ತದೆ.

3. ಅರ್ಜಿದಾರರು ತಮ್ಮ ವಾಹನವನ್ನು ಆರೋಪಿತರು ಕಗ್ಗಲಿ ಮರದ ತುಂಡುಗಳನ್ನು ಹಾಗೂ ಚೆಕ್ಕೆಗಳನ್ನು ಅನಧಿಕೃತವಾಗಿ ಯಾವುದೇ ರಹದಾರಿ ಇಲ್ಲದೆ ಸಾಗಾಣಿಕೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆಯಡಿ ಅಪರಾಧವಾಗಿರುತ್ತದೆ. ಆದುದರಿಂದ ನಿಯಮ 71'ಎ' ರಡಿ ವಿಚಾರಣೆಗೆ ಅರ್ಹವಾಗಿರುತ್ತದೆ.

4. ಈ ಪ್ರಕರಣದಲ್ಲಿ ವಾಹನವನ್ನು ಅಕ್ರಮವಾಗಿ ಕಗ್ಗಲಿ ಮರದ ತುಂಡುಗಳನ್ನು ಸಾಗಿಸುತ್ತಿದ್ದಾಗ ಪತ್ತೆ ಹಚ್ಚಿ ಹಿಡಿಯಲಾಗಿದ್ದು ಮೇಲ್ನೋಟಕ್ಕೆ ವಾಹನವನ್ನು ಕೃತ್ಯದಲ್ಲಿ ಉಪಯೋಗಿಸಿರುವುದು ಸಾಬೀತಾಗಿರುತ್ತದೆ. ಅರ್ಜಿದಾರರು ಇಂತಹ ಕೃತ್ಯಗಳಲ್ಲಿ ವಾಹನವು ಬಳಕೆಯಾಗದಂತೆ ತಪ್ಪಿಸಲು ಕೈಗೊಂಡ ಕ್ರಮಗಳ ಬಗ್ಗೆ ದಾಖಲೆಗಳನ್ನಾಗಲೀ ಸಮಜಾಯಿಷಿಯನ್ನಾಗಲೀ ನೀಡಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯ್ಯಾಲಯವು ಕೆ. ಕೃಷ್ಣನ್ ಎದುರು ಕರ್ನಾಟಕ ರಾಜ್ಯ 2000 ಎ.ಐ.ಆರ್.ಎಸ್.ಸಿ.ಡಬ್ಲ್ಯೂ. ತೀರ್ಪಿನಲ್ಲಿ ಈ ಅಂಶಗಳ ಬಗ್ಗೆ ಬೆಳಕನ್ನು ಚಲ್ಲುತ್ತದೆ. ಅಂತಹ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವಾಗಿದೆ.

5. ಅಮಾನತ್ತುಪಡಿಸಿಕೊಂಡಿರುವ ವಾಹನವನ್ನು ಹಾಗೂ ಮರಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಅಧಿಕೃತ ಅಧಿಕಾರಿಗಳ ನ್ಯಾಯಾಲಯದ ಮುಂದೆ ಈ ಪ್ರಕರಣ ದಾಖಲಾಗಿರುವುದರಿಂದ, ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಈ ನ್ಯಾಯಾಲಯವು ವಿಚಾರಣೆ ನಡೆಸಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸುವುದು ಸೂಕ್ತವಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಈ ಪ್ರಕರಣದ ಬಗ್ಗೆ 1963 ರ ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್–71 (ಎ) ಪ್ರಕಾರ ವಿಚಾರಣಾ ನಡಾವಳಿಗೆ ಒಳಪಡಿಸಲಾಗಿದ್ದು, ಹಾಗೂ ದಿನಾಂಕ: 11.05.2012 ರ ಮಧ್ಯಂತರ ಆದೇಶದಲ್ಲಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದ ಶ್ರೀ.ಜಾವಿದ್ ಮಮ್ತಾಜ್ ರವರು ತಿರಸ್ಕರಿಸಿರುತ್ತಾರೆ. ಪ್ರಕರಣ ಮುಕ್ತಾಯಗೊಳ್ಳುವ ತನಕ ವಾಹನವನ್ನು ಅರ್ಜಿದಾರರ ಮಧ್ಯಂತರ ಸುಪರ್ದಿಗೆ ವಹಿಸಿಕೊಡುವುದು ಸೂಕ್ತವಲ್ಲವೆಂದು ತೀರ್ಮಾನಿಸಿ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸುವುದು ಸೂಕ್ತವಾಗಿದೆ.

**ಆ ದೇ ಶ**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು **ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ** ಆದ ನಾನು ವಾಹನ ಸಂಖ್ಯೆ: **TN-72-Z-2799** ಹಾಗೂ ಮುದ್ದೆಮಾಲು 26 ಕಗ್ಗಲಿ ಮರದ ತುಂಡುಗಳು ಹಾಗೂ 56 ಚೀಲದಲ್ಲಿ ಸಣ್ಣ ಕಗ್ಗಲಿ ಮರದ ತುಂಡುಗಳು ಹಾಗೂ ಚೆಕ್ಕೆಗಳು ಸರ್ಕಾರದ ಪರ ಅಮಾನತ್ತುಪಡಿಸಿ ಆದೇಶಿಸಿದೆ.

ಈ ಆದೇಶವನ್ನು 18.04.2023 ರಂದು ನ್ಯಾಯಾಲಯದಲ್ಲಿ ಓದಿ ಹೇಳಲಾಯಿತು. ನಂತರ ಕಂಪ್ಯೂಟರಿನಲ್ಲಿ ಬೆರಳಚ್ಚುಗೊಳಿಸಿ, ರುಜುಮಾಡಿ ನ್ಯಾಯಾಲಯದ ಮೊಹರಿನೊಂದಿಗೆ ಬಿಡುಗಡೆ ಮಾಡಿರುತ್ತೇನೆ.

**(ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,)**
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಲೈ ಮಹದೇಶ್ವರ ವನ್ಯಜೀವಿ ವಿಭಾಗ,
ಕೊಳ್ಳೇಗಾಲ

**PR-102**

**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,**
**ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನ್ಯಾಯಾಲಯ**

| | | |
|---|---|---|
| **ಉಪಸ್ಥಿತರು** | :: | **ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,**<br>ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ. |
| **ದಿನಾಂಕ** | :: | **12ನೇ ಏಪ್ರಿಲ್ 2023**<br>ಅರಣ್ಯ ತಕ್ಷೀರು ಸಂಖ್ಯೆ : 10/2009–10<br>ದಿನಾಂಕ 22.04.2009 |
| **ಫಿರ್ಯಾದುದಾರರು** | :: | **ವಲಯ ಅರಣ್ಯಾಧಿಕಾರಿ,**<br>ರಾಮಾಪುರ ವನ್ಯಜೀವಿ ವಲಯ, ಕೌದಳ್ಳಿ |
| | | **ವಿರುದ್ಧ** |
| **ಆರೋಪಿಗಳು** | :: | **1) ಪವನ್ ಕುಮಾರ್ ಹಾಗೂ ಇತರರು** |
| **ಅರ್ಜಿದಾರರು** | :: | **ಪವನ್ ಕುಮಾರ್ ಬಿನ್.ಹೆಚ್.ಬಸವಣ್ಣ,**<br>**ಗೋಪಿಶೆಟ್ಟಿಯೂರು, ರಾಮಾಪುರ ಹೋಬಳಿ,**<br>**ಹನೂರು ತಾಲ್ಲೂಕು** |

## 1963 ರ ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ 71'ಎ' ಅಡಿಯಲ್ಲಿ ನಡಾವಳಿಗಳು

**–:ತೀರ್ಪು:–**

1. ದಿನಾಂಕ: 19.04.2009 ಬೆಳಗಿನ ಜಾವ 04 ಗಂಟೆ ಸಮಯದಲ್ಲಿ ರಾಮಾಪುರ ವಲಯದ ವಲಯ ಅರಣ್ಯಾಧಿಕಾರಿ ಹಾಗೂ ರಾಮಾಪುರ ಶಾಖೆಯ ಸಿಬ್ಬಂದಿ ವರ್ಗದವರು ಮೀಣ್ಯ ಗ್ರಾಮದಿಂದ ರಾಮಾಪುರಕ್ಕೆ ಹೋಗುವ ಪಿ.ಡಬ್ಲ್ಯೂ.ಡಿ ರಸ್ತೆ (ಕೊತ್ತಗುಳಿ ಗ್ರಾಮದ) ಬಳಿ ರಸ್ತೆಯಲ್ಲಿ ಕಾಡಾನೆಗಳು ರೈತರ ಜಮೀನುಗಳಿಗೆ ಪ್ರವೇಶಿಸದಂತೆ ತಡೆಯುವ ಸಲುವಾಗಿ ಕಾಯುತ್ತಿದ್ದಾಗ ರಸ್ತೆಯಲ್ಲಿ ಒಂದು ಗೂಡ್ಸ್ ಆಟೋ ಬರುವುದನ್ನು ಕಂಡು ಸಿಬ್ಬಂದಿ ವರ್ಗದವರು ಸದರಿ ಗೂಡ್ಸ್ ಆಟೋವನ್ನು ತಡೆದು ಪರಿಶೀಲಿಸಿದಾಗ ಗೂಡ್ಸ್ ಆಟೋದಲ್ಲಿ ಮರದ ಸೈಜುಗಳು ಇದ್ದು ಅವುಗಳನ್ನು ಪ್ಲಾಸ್ಟಿಕ್ ಹಗ್ಗದಿಂದ ಕಟ್ಟಿರುವುದು ಕಂಡುಬಂದಿರುತ್ತದೆ. ಮರಗಳನ್ನು ಪರಿಶೀಲಿಸಿದಾಗ ಕೊಡಲಿಯಿಂದ ಒರಟು ಕೆತ್ತನೆ ಮಾಡಿದ ಒಣ ಮತ್ತು ಹಸಿ ಮಿಶ್ರಿತ ತೇಗ ಮತ್ತು ಹೊನ್ನೆ ಸೈಜುಗಳಾಗಿದ್ದು, ಆಟೋದಲ್ಲಿ ಇವುಗಳನ್ನು ತುಂಬಿ ಮೂರು ಜನ ಆಸಾಮಿಗಳು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ನಂತರ ಆಟೋ ಮತ್ತು ಅದರಲ್ಲಿದ್ದ ಮುದ್ದೇ ಮಾಲುಗಳನ್ನು ವಶಕ್ಕೆ ತೆಗೆದುಕೊಂಡು ಸ್ಥಳ ಮಹಜರು ನಡೆಸಿ ಮರಗಳನ್ನು ಅಳತೆ ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 24(ಡಿ), 62, 80 ಮತ್ತು 71(ಎ) ಹಾಗೂ ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 144, 145 ಮತ್ತು 165 ರ ಪ್ರಕಾರ ಪ್ರಕರಣ ದಾಖಲಿಸಿ ಆರೋಪಿಗಳನ್ನು ಕೊಳ್ಳೇಗಾಲದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ದಿನಾಂಕ: 22.04.2009 ರಂದು ವಾಹನ ಹಾಗೂ ಮುದ್ದೇ ಮಾಲನ್ನು ಅಂದಿನ ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ಸಮ್ಮುಖದಲ್ಲಿ ಹಾಜರುಪಡಿಸಿರುತ್ತಾರೆ.

ಶ್ರೀ.ಬಿ.ಪವನ್ ಕುಮಾರ್, ಬಿನ್.ಬಸವಣ್ಣ, ಗೋಪಿಶೆಟ್ಟಿಯೂರು, ರಾಮಾಪುರ ಹೋಬಳಿ, ಹನೂರು ತಾಲ್ಲೂಕು ಆದ ನಾನು ದಿನಾಂಕ: 21.03.2023 ರ ಬೆಳಿಗ್ಗೆ ಮಾನ್ಯ ಅಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನ್ಯಾಯಾಲಯದಲ್ಲಿ ಹಾಜರಾಗಿ ನೀಡಿದ ಸ್ವಇಚ್ಛಾ ಹೇಳಿಕೆ ಏನೆಂದರೆ ದಿನಾಂಕ: 19.04.2023 ರಂದು ಗೂಡ್ಸ್ ಆಟೋ ಸಂಖ್ಯೆ: ಕೆಎ–10–2273

ವಾಹನದಲ್ಲಿ ತೇಗ ಮತ್ತು ಹೊನ್ನೆ ಸೈಜುಗಳನ್ನು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ಸಾಗಿಸುತ್ತಿರುವಾಗ ವಲಯ ಅರಣ್ಯಾಧಿಕಾರಿ, ರಾಮಾಪುರ ವನ್ಯಜೀವಿ ವಲಯ, ಕೌದಳ್ಳಿ ಹಾಗೂ ಇತರೆ ಸಿಬ್ಬಂದಿಗಳು ವಾಹನ ಹಾಗೂ ಸದರಿ ಮುದ್ದೆ ಮಾಲನ್ನು ಸರ್ಕಾರದ ಪರ ಅಮಾನತ್ತುಪಡಿಸಿ ಪ್ರಕರಣವನ್ನು ದಾಖಲಿಸಿ ಜೆ.ಎಂ.ಎಫ್.ಸಿ. ನ್ಯಾಯಾಲಯ, ಕೊಳ್ಳೇಗಾಲಕ್ಕೆ ಒಪ್ಪಿಸಿರುತ್ತಾರೆ. ಸದರಿ ವಾಹನದ ಮೂಲ ಮಾಲೀಕರಾದ ಶ್ರೀ.ಹೆಚ್.ರವೀಂದ್ರ, ಬಿನ್.ಹನುಮಂತಪ್ಪ, ಗೋಪಿಶೆಟ್ಟಿಯೂರು, ರಾಮಾಪುರ ಹೋಬಳಿ, ಹನೂರು ತಾಲ್ಲೂಕುವರಿಂದ ದಿನಾಂಕ: 04.05.2009 ರಂದು ರೂ. 65,000/– ಮೌಲ್ಯಕ್ಕೆ ಪವರ್ ಆಫ್ ಅಟಾರ್ನಿ ಬರೆಸಿಕೊಂಡಿದ್ದು ಅದರಿಂದ ಸದರಿ ವಾಹನದ ಎಲ್ಲಾ ಹಕ್ಕನ್ನು ಪವನ್ ಕುಮಾರ್, ಬಿನ್.ಬಸವಣ್ಣ ಆದ ನಾನು ಶ್ರೀ.ರವೀಂದ್ರ, ಬಿನ್.ಹನುಮಂತಪ್ಪ ರವರಿಂದ ಪಡೆದುಕೊಂಡು ಸದರಿ ವಾಹನದ ಬಗ್ಗೆ ಇನ್ನು ಮುಂದೆ ಇಲಾಖೆಯ ನ್ಯಾಯಾಲಯದಲ್ಲಿ ಹಾಜರಾಗಲು ಎಲ್ಲಾ ಹಕ್ಕನ್ನು ಪಡೆದಿರುತ್ತೇನೆ. ಸದರಿ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ 14 ತೇಗ ಹಾಗೂ 5 ಹೊನ್ನೆ ಸೈಜುಗಳನ್ನು ಅರಣ್ಯ ಪ್ರದೇಶದಿಂದ ಕಡಿದು ಸಾಗಾಣೆ ಮಾಡುತ್ತಿರುವಾಗ ಅರಣ್ಯ ಸಿಬ್ಬಂದಿಗಳು ಆಟೋ ಸಮೇತ ಹಿಡಿದಿರುತ್ತಾರೆ. ನಾನು ಜೀವನೋಪಯಾಕ್ಕಾಗಿ ಕೂಲಿ ಕೆಲಸವನ್ನು ಮಾಡಿಕೊಂಡಿದ್ದು, ಬೇರೆ ಯಾವುದೇ ಜಮೀನಾಗಲೀ ಅಥವಾ ಇತರೆ ಆದಾಯವಾಗಲೀ ಇರುವುದಿಲ್ಲ. ಸದರಿ ವಾಹನವನ್ನು ಕಾನುನುಬಾಹಿರ ಕೃತ್ಯಕ್ಕೆ ಉಪಯೋಗಿಸಿಕೊಂಡಿದ್ದರಿಂದ ಇದನ್ನು ಸರ್ಕಾರದ ಪರ ಅಮಾನತ್ತುಪಡಿಸಿಕೊಂಡಿದ್ದರಿಂದ ನನಗೆ ತುಂಬಲಾರದ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಅರ್ಜಿದಾರನಾದ ನಾನು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುವುದೇನೆಂದರೆ ನನ್ನ ಮೇಲೆ ಯಾವುದೇ ಪ್ರಕರಣವನ್ನು ದಾಖಲಿಸದಂತೆ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಹಾಗೂ ವಾಹನದ ಬಗ್ಗೆ ಘನ ನ್ಯಾಯಾಲಯವು ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ದನಾಗಿರುತ್ತೇನೆ. ಸದರಿ ವಾಹನದ ಬಗ್ಗೆ ನಾನು ಎಲ್ಲಾ ಹಕ್ಕನ್ನು ಬಿಟ್ಟುಕೊಟ್ಟಿರುತ್ತೇನೆ. ಆದ್ದರಿಂದ ಘನ ನ್ಯಾಯಾಲಯವು ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ದನಾಗಿರುತ್ತೇನೆಂದು ಈ ರೀತಿಯಾಗಿ ಹೇಳಿಕೆಯನ್ನು ನೀಡಿರುತ್ತಾನೆ.

ಶ್ರೀ.ಸಿದ್ದು, ಉಪ ವಲಯ ಅರಣ್ಯಾಧಿಕಾರಿ ವ ಮೋಜಣಿದಾರ (ನಿವೃತ್ತ) ರಾಮಾಪುರ ಶಾಖೆ ಇವರು ದಿನಾಂಕ: 21.03.2023 ರಂದು ಮಾನ್ಯ ಅಧಿಕೃತ ಅಧಿಕಾರಿ ಹಾಗೂ ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನ್ಯಾಯಾಲಯದ ಸಮಕ್ಷಮ ಹಾಜರಾಗಿ ಅರಣ್ಯ ಮೊಕದ್ದಮೆ ಸಂಖ್ಯೆ: 10/2009–10 ದಿನಾಂಕ: 22.04.2009 ರ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಡಿದ ಹೇಳಿಕೆ ಏನೆಂದರೆ ದಿನಾಂಕ: 19.04.2009 ರಂದು ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ಬಂದ ಖಚಿತ ವರ್ತಮಾನದ ಮೇರೆಗೆ ರಾಮಾಪುರ ವಲಯದ ವಲಯ ಅರಣ್ಯಾಧಿಕಾರಿ ಹಾಗೂ ರಾಮಾಪುರ ಶಾಖೆಯ ಸಿಬ್ಬಂದಿ ವರ್ಗದವರು ಮೀಣ್ಯ ಗ್ರಾಮದಿಂದ ರಾಮಾಪುರಕ್ಕೆ ಹೋಗುವ ಪಿ.ಡಬ್ಲ್ಯೂ.ಡಿ ರಸ್ತೆ (ಕೊತ್ತಗುಳಿ ಗ್ರಾಮದ) ಕರಿಕಲ್ಲು ಗುಡ್ಡ ಬಳಿ ರಸ್ತೆಯಲ್ಲಿ ಕಾಡಾನೆಗಳು ರೈತರ ಜಮೀನುಗಳಿಗೆ ಪ್ರವೇಶಿಸದಂತೆ ತಡೆಯುವ ಸಲುವಾಗಿ ಕಾಯುತ್ತಿದ್ದಾಗ ರಸ್ತೆಯಲ್ಲಿ ಒಂದು ಗೂಡ್ಸ್ ಆಟೋ ಬರುವುದನ್ನು ಕಂಡು ಸಿಬ್ಬಂದಿ ವರ್ಗದವರು ಸದರಿ ಗೂಡ್ಸ್ ಆಟೋವನ್ನು ತಡೆದು ಪರಿಶೀಲಿಸಿದಾಗ ಗೂಡ್ಸ್ ಆಟೋದಲ್ಲಿ ಮರದ ಸೈಜುಗಳು ಇದ್ದು ಅವುಗಳನ್ನು ಪ್ಲಾಸ್ಟಿಕ್ ಹಗ್ಗದಿಂದ ಕಟ್ಟಿರುವುದು ಕಂಡುಬಂದಿರುತ್ತದೆ. ಮರಗಳನ್ನು ಪರಿಶೀಲಿಸಿದಾಗ ಕೊಡಲಿಯಿಂದ ಒರಟು ಕೆತ್ತನೆ ಮಾಡಿದ ಒಣ ಮತ್ತು ಹಸಿ ಮಿಶ್ರಿತ ತೇಗ ಮತ್ತು ಹೊನ್ನೆ ಸೈಜುಗಳಾಗಿದ್ದು, ಆಟೋದಲ್ಲಿ ಇವುಗಳನ್ನು ತುಂಬಿ ಮೂರು ಜನ ಆಸಾಮಿಗಳು ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಸದರಿ ತೇಗ ಮತ್ತು ಹೊನ್ನೆಯ ಸೈಜುಗಳನ್ನು ಕೆಂಪು ಬಣ್ಣದ ಚಾಕ್‌ಪೀಸ್‌ನಿಂದ 01 ರಿಂದ 19 ಕ್ರಮ ಸಂಖ್ಯೆಯನ್ನು ನೀಡಿ, ಮೀಟರ್‌ನಲ್ಲಿ ಅಳತೆ ಮಾಡಿ ನಂತರ ಗೂಡ್ಸ್ ಆಟೋ ಚಾಲಕ ಮತ್ತು ಇಬ್ಬರು ಆಸಾಮಿಗಳ ವಿಳಾಸ ವಿಚಾರಿಸಲಾಗಿ, 1ನೇ ಆಟೋ ಚಾಲಕ ಸುಮಾರು 20 ವರ್ಷದ ಪವನ್ ಎಂಬುದಾಗಿ ಗೂಡ್ಸ್ ಆಟೋ ಕೆಎ–10–2273 ಇದ್ದು 2ನೇ ಆರೋಪಿ ಪ್ರದೀಪ್ ಎಂಬುದಾಗಿ ಹಾಗೂ 3ನೇ ಆರೋಪಿಯ ಹೆಸರು ಗಣೇಶಾಚಾರಿ ಎಂಬುದಾಗಿ ತಿಳಿಸಿರುತ್ತಾನೆ.

ನಂತರ ಆಟೋ ಮತ್ತು ಅದರಲ್ಲಿದ್ದ ಮುದ್ದೇ ಮಾಲುಗಳನ್ನು ವಶಕ್ಕೆ ತೆಗೆದುಕೊಂಡು ಸ್ಥಳ ಮಹಜರು ನಡೆಸಿ ಮರಗಳನ್ನು ಅಳತೆ ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ರ ಸೆಕ್ಷನ್ 24(ಡಿ), 62, 80 ಮತ್ತು 71(ಎ) ಹಾಗೂ ಕರ್ನಾಟಕ ಅರಣ್ಯ ನಿಯಮ 1969 ರ ನಿಯಮ 144, 145 ಮತ್ತು 165 ರ ಪ್ರಕಾರ ಪ್ರಕರಣ ದಾಖಲಿಸಿ ಆರೋಪಿಗಳನ್ನು ಕೊಳ್ಳೇಗಾಲದ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಇದೇ ರೀತಯಾಗಿ 2ನೇ ಸಾಕ್ಷಿಯಾದ ಶ್ರೀ.ಸುನಿಲ್‌ಕುಮಾರ್ ಅರಣ್ಯ ವೀಕ್ಷಕ ಇವರು ಸಹ ಮೇಲಿನಂತೆಯೇ ಸಾಕ್ಷಿಯನ್ನು ನುಡಿದಿರುತ್ತಾರೆ.

## ಕಾರಣಗಳು

1. ಆದ್ದರಿಂದ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ವಾಹನವು ಅರಣ್ಯ ಅಪರಾಧದಲ್ಲಿ ತೊಡಗಿರುವುದು ನಿಶಂಸಯವಾಗಿ ಕಂಡುಬಂದಿರುತ್ತದೆ. ಅರಣ್ಯ ಕಾಯ್ದೆಯಡಿಯಲ್ಲಿ ನಡೆಸಲಾಗುವ ನಡಾವಳಿಗಳಲ್ಲಿ ಅಮಾನತ್ತುಪಡಿಸಲಾಗಿರುವ ಅರಣ್ಯ ಉತ್ಪನ್ನವು ಸರ್ಕಾರಕ್ಕೆ ಸೇರಿದ ಸ್ವತ್ತಲ್ಲ ಎಂಬುದನ್ನು ರುಜುವಾತುಪಡಿಸುವುದು ಸೆಕ್ಷನ್ 80 ರ ಪ್ರಕಾರ ಸಂಬಂಧಿಸಿದ ಆರೋಪಿಗಳದ್ದಾಗಿರುತ್ತದೆ. ಈ ಪ್ರಕರಣದಲ್ಲಿ ಆರೋಪಿಗಳಾಗಲೀ ಅಥವಾ ಅರ್ಜಿದಾರರಾಗಲೀ ಶ್ರೀಗಂಧದ ತುಂಡುಗಳು ಸರ್ಕಾರಕ್ಕೆ ಸೇರಿದ ಸ್ವತ್ತಲ್ಲ ಎಂಬುದನ್ನು ರುಜುವಾತುಪಡಿಸಿಲ್ಲ.

2. ಫಿರ್ಯಾದುದಾರರ ಪರ ಅಭಿಯೋಜಕರು ಹಾಗೂ ಸರ್ಕಾರಿ ವಕೀಲರು ಲಿಖಿತ ವಾದ ಮಂಡಿಸಿದ್ದು, ಪ್ರಾ.ಸಾ 1 ರಿಂದ 06 ರವರ ಸಾಕ್ಷ್ಯ ಹಾಗೂ ನಿಶಾನೆ ಪಿ1 ರಿಂದ ಪಿ6 ದಾಖಲಾತಿಗಳಿಂದ ವಾಹನವು ಅರಣ್ಯ ಅಪರಾಧದಲ್ಲಿ ಭಾಗಿಯಾಗಿರುವುದು ರುಜುವಾತಾಗುತ್ತದೆ ಎಂದು ವಾದಿಸಿರುತ್ತಾರೆ.

3. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೇನೆಂದರೆ ಹೊನ್ನೆ ಮತ್ತು ತೇಗದ ಸೈಜುಗಳನ್ನು ಕದ್ದು ಸಾಗಿಸುತ್ತಿದ್ದು, ಮೇಲ್ನೋಟಕ್ಕೆ ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್ 71'ಎ' ಪ್ರಕಾರ ಸಂಬಂಧಿಸಿದ ವಾಹನವು ಮುಟ್ಟುಗೋಲು ಹಾಕಿಕೊಳ್ಳಲು ಬದ್ಧವಾಗಿದೆ. ಸದರಿ ಕಾಯ್ದೆಯ ಸೆಕ್ಷನ್ 80 ರ ಪ್ರಕಾರ ಅಮಾನತ್ತುಪಡಿಸಿದ ಮರಗಳು ಅರಣ್ಯದಿಂದ ಬಂದ ಮರವಲ್ಲ. ಎಂಬುದಾಗಿ ರುಜುವಾತುಪಡಿಸುವ ಹೊಣೆಗಾರಿಕೆಯು ಸಂಬಂಧಿಸಿದ ಆರೋಪಿಗಳದ್ದಾಗಿದೆ.

ಮೇಲೆ ಹೇಳಿರುವಂತೆ ವಾಹನವು ಅರಣ್ಯ ಅಪರಾಧದಲ್ಲಿ ಭಾಗಿಯಾಗಿರುವುದನ್ನು ಅಭಿಯೋಜಕರು ಸಾಕ್ಷ್ಯಾಧಾರಗಳ ಸಮೇತ ನ್ಯಾಯಾಲಯಕ್ಕೆ ರುಜುವಾತುಪಡಿಸಿದೆ. ವಾಹನವು ಇಂತಹ ಅಪರಾಧದಲ್ಲಿ ಬಳಕೆಯಾಗುವುದನ್ನು ತಪ್ಪಿಸಲು ಮಾಲೀಕರು ಮತ್ತು ಅದರ ಉಸ್ತುವಾರಿದಾರರು ಕೈಗೊಂಡ ಮುಂಜಾಗ್ರತಾ ಕ್ರಮಗಳ ಬಗ್ಗೆ ರುಜುವಾತುಪಡಿಸುವ ಹೊಣೆಗಾರಿಕೆ ಅವರ ಮೇಲಿದ್ದು, ಪ್ರಕರಣದಲ್ಲಿ ಈ ಬಗ್ಗೆ ಸಾಕ್ಷ್ಯ ಹಾಜರುಪಡಿಸಲು ವಿಫಲರಾಗಿದ್ದಾರೆ. ತತ್‌ಪರಿಣಾಮವಾಗಿ ನ್ಯಾಯಾಲಯ ಈ ಕೆಳಗಿನಂತೆ ಆದೇಶ ಹೊರಡಿಸುವುದು ಸೂಕ್ತವಾಗಿದೆ.

## ಆ ದೇ ಶ

**1963 ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 71 'ಎ'** ಅಡಿಯಲ್ಲಿ **ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,** ಆದ ನಾನು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿರುವ ಗೂಡ್ಸ್ ಆಟೋ ನೋಂದಣಿ ಸಂಖ್ಯೆ: ಕೆಎ–10–2273 ಹಾಗೂ ಹೊನ್ನೆ ಮತ್ತು ತೇಗದ ಸೈಜುಗಳನ್ನು ಇಲಾಖಾ ಪರ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಈ ಆದೇಶ ಹೊರಡಿಸಿದ 30 ದಿನಗಳ ಒಳಗಾಗಿ ಮೇಲ್ಮನವಿ ಸಲ್ಲಿಸದೆ ಇದ್ದಲ್ಲಿ ಈ ಆದೇಶವೇ ಅಂತಿಮವಾಗಿರುತ್ತದೆ.

(ನನ್ನಿಂದ ಕಂಪ್ಯೂಟರ್ ಆಪರೇಟರ್‌ಗೆ ಹೇಳಿ, ಪರಿಷ್ಕರಿಸಿ, ತಿದ್ದಿ ನ್ಯಾಯಾಲಯದಲ್ಲಿ ಈ ದಿನ 28ನೇ ಮಾರ್ಚ್–2023 ರಂದು ಬಹಿರಂಗವಾಗಿ ಉಚ್ಚರಿಸಲಾಗಿದೆ).

**(ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,)**
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.

**ಅನೆಕ್ಷರ್**

**ಅಭಿಯೋಗದ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ**

1. ಪ್ರಾ.ಸಾ–1 – ಶ್ರೀ.ಸಿದ್ದು,
ಉಪ ವಲಯ ಅರಣ್ಯಾಧಿಕಾರಿ ವ ಮೋಜಣಿದಾರ
ರಾಮಾಪುರ ವನ್ಯಜೀವಿ ವಲಯ, ಕೌದಳ್ಳಿ
2. ಪ್ರಾ.ಸಾ–2 – ಶ್ರೀ.ಸುನೀಲ್ ಕುಮಾರ್,
ಅರಣ್ಯ ವೀಕ್ಷಕ, ಕೊಳ್ಳೇಗಾಲ ಬಫರ್ ವಲಯ

**ಅಭಿಯೋಗದ ಪರವಾಗಿ ಗುರುತಿಸಲಾಗಿರುವ ದಾಖಲಾತಿಗಳ ಪಟ್ಟಿ**

1. ಪಿ1 – ಮಹಜರು.
2. ಪಿ1ಎ – ಪ್ರಾ.ಸಾ–1 ರವರ ಸಹಿ
3. ಪಿ1ಬಿ – ಪ್ರಾ.ಸಾ–2 ರವರ ಸಹಿ
4. ಪಿ2 – ಪ್ರಥಮ ಮಾಹಿತಿ ವರದಿ
5. ಪಿ3 – ಅಮಾನತ್ತು ವರದಿ (Seizure Report)

**ಅಭಿಯೋಗದ ಪರವಾಗಿ ಗುರುತಿಸಿರುವ ಮುದ್ದೆಮಾಲುಗಳ ಪಟ್ಟಿ**

1. ಮುದ್ದೆಮಾಲು – ತೇಗ ಮತ್ತು ಹೊನ್ನೆ ಸೈಜುಗಳು 01 ರಿಂದ 19 ಸಂಖ್ಯೆ
2. ವಾಹನ – ಗೂಡ್ಸ್ ಆಟೋ ಕೆಎ–10–2273

**ಆರೋಪಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ**

– ಇಲ್ಲ –

**ಆರೋಪಿಗಳ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ**

– ಇಲ್ಲ –

**ಆರೋಪಿಗಳ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿ**

– ಇಲ್ಲ –

**(ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,)**
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.

## PR-103

**ಅಧಿಕೃತ ಅಧಿಕಾರಿಗಳು ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,**
**ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನ್ಯಾಯಾಲಯ**
**ದಿನಾಂಕ : 23.05.2023**

**ಉಪಸ್ಥಿತರು ::** **ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,**
**ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು**
**ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ.**

**ರಾಮಾಪುರ ಪೊಲೀಸ್ ಠಾಣಾ ಮೊಕದ್ದಮೆ ಸಂಖ್ಯೆ : 109/2009–10 ದಿನಾಂಕ: 11.08.2009**

**ಫಿರ್ಯಾದುದಾರರು** :: **ಆರಕ್ಷಕ ಉಪ ನಿರೀಕ್ಷಕರು,**
ರಾಮಾಪುರ ಪೊಲೀಸ್ ಠಾಣೆ, ರಾಮಾಪುರ.

**ವಿರುದ್ಧ**

**ಆರೋಪಿ** :: **1) ಜೋಸೆಫ್ ಬಿನ್.ಆಂತೋಣಿ**
**2) ಮಾದಯ್ಯ ಬಿನ್.ಬೊಮ್ಮಯ್ಯ**
**3) ಕೆಂಚ ಬಿನ್.ಬೊಮ್ಮಯ್ಯ**
**4) ಮಣಿ ಬಿನ್.ಆಂಥೋಣಿ ಸ್ವಾಮಿ**

**ಅರ್ಜಿದಾರರು :: ಮಾದಯ್ಯ, ಬಿನ್.ಬೊಮ್ಮಯ್ಯ**
ಬಿದರಹಳ್ಳಿ ಗ್ರಾಮ,
ಕೊಳ್ಳೇಗಾಲ ತಾಲ್ಲೂಕು

**1963 ರ ಕರ್ನಾಟಕ ಅರಣ್ಯ ಕಾಯ್ದೆಯ ಸೆಕ್ಷನ್ 71(ಎ) r/w ಸೆಕ್ಷನ್ 63 ರ ಅಡಿಯಲ್ಲಿ ನಡಾವಳಿಗಳು**

**"ಅಂತಿಮ ಆದೇಶ"**

ದಿನಾಂಕ: 11.08.2009 ರಂದು ಕೊಳ್ಳೇಗಾಲ ತಾಲ್ಲೂಕು ರಾಮಾಪುರ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿತ ವಿರುದ್ಧ ಕರ್ನಾಟಕ ಅರಣ್ಯ ಕಾಯ್ದೆ ಕಲಂ 24, ಶಸ್ತ್ರಾಸ್ತ್ರ ಕಾಯ್ದೆ ಕಲಂ 3 ಮತ್ತು 2, ವನ್ಯಜೀವಿ ಸಂರಕ್ಷಣಾ ಕಾಯ್ದೆ ಕಲಂ 2(16), (15), 9, 44, 48, 49, 51 ಸಹ ಕಲಂ ಭಾ.ದಂ.ಸಂ.ಕಲಂ. 427 ಹಾಗೂ 379 ರ ಶಿಕ್ಷಾರ್ಹ ಅಪರಾಧಗಳಿಗಾಗಿ ಪ್ರಕರಣವನ್ನು ದಾಖಲಿಸಿರುತ್ತಾರೆ. ಈ ಪ್ರಕರಣದ ಸಂಕ್ಷಿಪ್ತ ವಿದ್ಯಮಾನಗಳೇನೆಂದರೆ ರಾಮಾಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೌದಳ್ಳಿಯ ಎಡೆಯಾರಹಳ್ಳಿ ಅರಣ್ಯ ಪ್ರದೇಶದಲ್ಲಿ ಟಿ.ವಿ.ಎಸ್. ಮೊಪೆಡ್ ನೋಂದಣಿ ಸಂಖ್ಯೆ: ಕೆಎ–10 ಜೆ–9510 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಇಲ್ಲದೆ ನಾಡ ಬಂದೂಕಿನೊಂದಿಗೆ ಮುನಿಗುಡಿ ಅರಣ್ಯ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿ 15 ವರ್ಷದ ಗಂಡಾನೆಯನ್ನು ನಾಡ ಬಂದೂಕಿನಿಂದ ಹೊಡೆದು ಹಾಗೂ ಕೊಡಲಿಯಿಂದ ಕೊಚ್ಚಿ ಆನೆಯನ್ನು ಕೊಂದು 2 ದಂತಗಳನ್ನು ಕಳುವು ಮಾಡಿರುವ ಅಪರಾಧ.

ಕರ್ನಾಟಕ ಅರಣ್ಯ ಕಾಯ್ದೆನ್ವಯ ರಾಮಾಪುರ ಪೊಲೀಸ್ ಠಾಣೆ ಅಧಿಕಾರಿಗಳು ಸಿ.ಆರ್. ನಂ. 109/2009–10 ರಂತೆ ಕೇಸು ದಾಖಲಿಸಿಕೊಂಡು ಆರೋಪಿಗಳ ಮೇಲೆ ಕಲಂ 71ಎ ರೀತ್ಯ ಅರಣ್ಯ ಕಾಯ್ದೆ ಅಡಿ ಕೇಸನ್ನು ದಾಖಲಿಸಿ ಸದರಿ ಪ್ರಕರಣದಲ್ಲಿ ವಾಹನವನ್ನು ಅಮಾನತ್ತು ಪಡಿಸಿ ಕೊಂಡಿರುತ್ತಾರೆ. ಸದರಿ ವಾಹನದ ನೋಂದಣಿ ಸಂಖ್ಯೆ: ಕೆಎ–10 ಜೆ–9510 ಆಗಿರುತ್ತದೆ.

**ಕಾರಣಗಳು**

1. ಈ ತಕರಾರಿನ ಜೊತೆ ಎಫ್.ಐ.ಆರ್. ಹಾಗೂ ಮಹಜರನ್ನು ಸಹ ತಕರಾರಿನ ಒಂದು ಭಾಗವಾಗಿ ಪರಿಗಣಿಸಿದೆ.

2. ಅರ್ಜಿದಾರರು ತಮ್ಮ ವಾಹನವನ್ನು ಆರೋಪಿತರು ಆನೆ ದಂತವನ್ನು ಅನಧಿಕೃತವಾಗಿ ಯಾವುದೇ ರಹದಾರಿ ಇಲ್ಲದೆ ಸಾಗಾಣಿಕೆ ಮಾಡಿರುವುದು ಕರ್ನಾಟಕ ಅರಣ್ಯ ಕಾಯ್ದೆಯಡಿ ಅಪರಾಧವಾಗಿರುತ್ತದೆ. ಆದುದರಿಂದ ನಿಯಮ 71'ಎ' ರಡಿ ವಿಚಾರಣೆಗೆ ಅರ್ಹವಾಗಿರುತ್ತದೆ.

3. ಈ ಪ್ರಕರಣದಲ್ಲಿ ವಾಹನವನ್ನು ಅಕ್ರಮವಾಗಿ ಆನೆ ದಂತವನ್ನು ಸಾಗಿಸುತ್ತಿದ್ದಾಗ ಪತ್ತೆ ಹಚ್ಚಿ ಹಿಡಿಯಲಾಗಿದ್ದು ಮೇಲ್ನೋಟಕ್ಕೆ ವಾಹನವನ್ನು ಕೃತ್ಯದಲ್ಲಿ ಉಪಯೋಗಿಸಿರುವುದು ಸಾಬೀತಾಗಿರುತ್ತದೆ. ಅರ್ಜಿದಾರರು ಇಂತಹ ಕೃತ್ಯಗಳಲ್ಲಿ ವಾಹನವು ಬಳಕೆಯಾಗದಂತೆ ತಪ್ಪಿಸಲು ಕೈಗೊಂಡ ಕ್ರಮಗಳ ಬಗ್ಗೆ ದಾಖಲೆಗಳನ್ನಾಗಲೀ ಸಮಜಾಯಿಷಿಯನ್ನಾಗಲೀ ನೀಡಿರುವುದಿಲ್ಲ. ಮಾನ್ಯ ಸರ್ವೋಚ್ಚ ನ್ಯಾಯ್ಯಾಲಯವು ಕೆ. ಕೃಷ್ಣನ್ ಎದುರು ಕರ್ನಾಟಕ ರಾಜ್ಯ 2000 ಎ.ಐ.ಆರ್.ಎಸ್.ಸಿ.ಡಬ್ಲ್ಯೂ. ತೀರ್ಪಿನಲ್ಲಿ ಈ ಅಂಶಗಳ ಬಗ್ಗೆ ಬೆಳಕನ್ನು ಚಲ್ಲುತ್ತದೆ. ಅಂತಹ ವಾಹನಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವಾಗಿದೆ.

4. ಅಮಾನತ್ತುಪಡಿಸಿಕೊಂಡಿರುವ ವಾಹನವನ್ನು ಹಾಗೂ ಆನೆ ದಂತಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಅಧಿಕೃತ ಅಧಿಕಾರಿಗಳ ನ್ಯಾಯಾಲಯದ ಮುಂದೆ ಈ ಪ್ರಕರಣ ದಾಖಲಾಗಿರುವುದರಿಂದ, ಮುಟ್ಟುಗೋಲು ಹಾಕಿಕೊಳ್ಳುವ ಸಂಬಂಧ ಈ ನ್ಯಾಯಾಲಯವು ವಿಚಾರಣೆ ನಡೆಸಿ ವಾಹನವನ್ನು ಸರ್ಕಾರದ ಪರ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸುವುದು ಸೂಕ್ತವಾಗಿದೆ.

5. ಅರ್ಜಿದಾರರಾದ ಮಾದಯ್ಯ, ಬಿನ್.ಬೊಮ್ಮಯ್ಯ ರವರು ತಮ್ಮ ಹೇಳಿಕೆಯಲ್ಲಿ ಸದರಿ ಪ್ರಕರಣದಲ್ಲಿ ಇಲಾಖಾ ಪರ ಅಮಾನತ್ತುಪಡಿಸಿಕೊಂಡಿರುವ ದ್ವಿಚಕ್ರ ವಾಹನವು ನೋಂದಣಿ ಸಂಖ್ಯೆ: ಕೆಎ–10 ಜೆ–9510 ಟಿ.ವಿ.ಎಸ್. ಮೊಪೆಡ್ ಪ್ರಕರಣದಲ್ಲಿ ಭಾಗಿಯಾಗಿರುವುದರಿಂದ ಸದರಿ ವಾಹನವನ್ನು ಅರಣ್ಯ ಇಲಾಖೆಯು ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ದನಾಗಿರುವೆನೆಂದು ಹಾಗೂ ಸದರಿ ದ್ವಿಚಕ್ರ ವಾಹನದ ಮೇಲಿನ ಎಲ್ಲಾ ಮಾಲೀಕತ್ವದ ಹಕ್ಕನ್ನು ಬಿಟ್ಟುಕೊಟ್ಟು ಅರಣ್ಯ ಇಲಾಖೆಗೆ ಮುಂದೆ ತೆಗೆದುಕೊಳ್ಳುವ ಯಾವುದೇ ನಿರ್ಧಾರಕ್ಕೆ ಬದ್ದನಾಗಿರುವೆನೆಂದು ಹಾಗೂ ಯಾವುದೇ ತಂಟೆತಕರಾರು ಇರುವುದಿಲ್ಲವೆಂದು ತನ್ನ ಸ್ವಇಚ್ಚಾ ಹೇಳಿಕೆಯನ್ನು ನೀಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಈ ಪ್ರಕರಣದ ಬಗ್ಗೆ 1963 ರ ಕರ್ನಾಟಕ ಅರಣ್ಯ ಕಾಯ್ದೆ ಸೆಕ್ಷನ್–71 (ಎ) ಪ್ರಕಾರ ವಿಚಾರಣಾ ನಡಾವಳಿಗೆ ಒಳಪಡಿಸಲಾಗಿದ್ದು, ಆದ್ದರಿಂದ ಈ ಕೆಳಕಂಡಂತೆ ಆದೇಶ ಹೊರಡಿಸುವುದು ಸೂಕ್ತವಾಗಿದೆ.

**ಆ ದೇ ಶ**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು **ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ., ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ** ಆದ ನಾನು ವಾಹನ ಸಂಖ್ಯೆ: **KA-10-J-9510** ಹಾಗೂ ಮುದ್ದೆಮಾಲು ಆನೆ ದಂತಗಳನ್ನು ಸರ್ಕಾರದ ಪರ ಅಮಾನತ್ತುಪಡಿಸಿ ಆದೇಶಿಸಿದೆ.

ಈ ಆದೇಶವನ್ನು 23.05.2023 ರಂದು ನ್ಯಾಯಾಲಯದಲ್ಲಿ ಓದಿ ಹೇಳಲಾಯಿತು. ನಂತರ ಕಂಪ್ಯೂಟರಿನಲ್ಲಿ ಬೆರಳಚ್ಚುಗೊಳಿಸಿ, ರುಜುಮಾಡಿ ನ್ಯಾಯಾಲಯದ ಮೊಹರಿನೊಂದಿಗೆ ಬಿಡುಗಡೆ ಮಾಡಿರುತ್ತೇನೆ.

ಸಹಿ/–
**(ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,)**
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಲೈ ಮಹದೇಶ್ವರ ವನ್ಯಜೀವಿ ವಿಭಾಗ,
ಕೊಳ್ಳೇಗಾಲ

**ಅನೆಕ್ಷರ್**

**ಅಭಿಯೋಗದ ಪರವಾಗಿ ಗುರುತಿಸಲಾಗಿರುವ ದಾಖಲಾತಿಗಳ ಪಟ್ಟಿ**

| | | | |
|---|---|---|---|
| 1. | ಪಿ1 | – | ಮಹಜರು. |
| 2. | ಪಿ2 | – | ಪ್ರಥಮ ಮಾಹಿತಿ ವರದಿ |
| 3. | ಪಿ3 | – | ಅಮಾನತ್ತು ವರದಿ (Seizure Report) |

**ಅಭಿಯೋಗದ ಪರವಾಗಿ ಗುರುತಿಸಿರುವ ಮುದ್ದೆಮಾಲುಗಳ ಪಟ್ಟಿ**

| | | |
|---|---|---|
| 2. | ದ್ವಿಚಕ್ರ ವಾಹನ | –TVS Moped ದ್ವಿಚಕ್ರ ವಾಹನ |
| | ನೋಂದಣಿ ಸಂಖ್ಯೆ: ಕೆಎ–10 ಜೆ–9510 | |

**ಆರೋಪಿಗಳ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ**
– ಇಲ್ಲ –
**ಆರೋಪಿಗಳ ಪರ ಗುರುತಿಸಲಾದ ದಾಖಲಾತಿಗಳ ಪಟ್ಟಿ**
– ಇಲ್ಲ –
**ಆರೋಪಿಗಳ ಪರ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿ**
– ಇಲ್ಲ –

**(ಡಾ॥ ಸಂತೋಷ್ ಕುಮಾರ್ ಜಿ. ಭಾ.ಅ.ಸೇ.,)**
ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮಲೈ ಮಹದೇಶ್ವರ ವನ್ಯಜೀವಿ ವಿಭಾಗ,
ಕೊಳ್ಳೇಗಾಲ

ಕಂದಾಯ ಇಲಾಖೆ

## ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು - 575 001,

## ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013

## ಕಲಂ 93 (1) ರನ್ವಯ ರದ್ದುಪಡಿ ಅಧಿಸೂಚನೆ

ನಂಬ್ರ: ಎಲ್.ಎ.ಕ್ಯೂ.ಸಿ.ಆರ್ **2/2021/138089/ಬಿ1** ದಿನಾಂಕ: 22-02-2023

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲೂಕು ಕುಡುಪು ಗ್ರಾಮದ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ, ಅಂದರೆ ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿರುವ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಪ್ರಾಕೃತಿಕ ವಿಕೋಪದಿಂದಾಗಿ ಘನತ್ಯಾಜ್ಯ ಕುಸಿತದಿಂದ ಹಾನಿಗೊಳಗಾಗಿರುವ ಕುಡುಪು ಗ್ರಾಮದ ಒಟ್ಟು 17.24.17 ಎಕ್ರೆ ಜಮೀನುಗಳನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಪ್ರಾಕೃತಿಕ ವಿಕೋಪದಿಂದಾಗಿ ಹಾನಿಗೊಳಗಾದ 0.36 ಎಕ್ರೆ ಜಮೀನನ್ನು ಭೂಸ್ವಾಧೀನ ಕಾಯ್ದೆ- 2013ರ ಕಲಂ 40 ರಡಿಯಲ್ಲಿ ತುರ್ತುವಿಧಿ ಬಳಸಿ ಭೂಸ್ವಾಧಿನಪಡಿಸಲು ಸರ್ಕಾರವು ಪತ್ರ ಸಂಖ್ಯೆ:ಕಂ.ಇ 01 ಎಕ್ಯೂಎ 2022 (ಇ) ದಿನಾಂಕ:29.01.2022 ರಂದು ಆದೇಶ ನೀಡಿದ ಹಿನ್ನಲೆಯಲ್ಲಿ ಭೂಸ್ವಾಧೀನ ಕಾಯ್ದೆ ಕಲಂ 11(1) ರ ಅಧಿಸೂಚನೆ ಸಂಖ್ಯೆ ಎಲ್.ಎ.ಕ್ಯೂ.ಇತರೆ.ಸಿ.ಆರ್ 02/2021/138089/ಬಿ1 ದಿನಾಂಕ: 31-03-2022 ರಂತೆ ಪ್ರಾಥಾಮಿಕ ಅಧಿಸೂಚನೆ ಹೊರಡಿಸಿದ್ದು, ಸದ್ರಿ ಅಧಿಸೂಚನೆಯು ದಿನಾಂಕ 27-04-2022 ರಂದು ರಾಜ್ಯಪತ್ರದ ಭಾಗ 6ಎ ಪುಟ ಸಂಖ್ಯೆ 1111 ರಿಂದ 1114 ರವರೆಗೆ ಪ್ರಕಟವಾಗಿರುತ್ತದೆ. ಕುಡುಪು ಗ್ರಾಮದ ಒಟ್ಟು 0.36 ಎಕ್ರೆ ಜಮೀನಿನ ಪೈಕಿ ಈ ಕೆಳಕಾಣಿಸಿದ 0.04 ಎಕ್ರೆ ಜಮೀನುಗಳು ಭೂಸ್ವಾಧೀನತೆಗೊಳಪಡಿಸುವ ಜಮೀನಿಗೆ ಹೊಂದಿಕೊಂಡಿರದೆ ದೂರದಲ್ಲಿದ್ದು, ಭವಿಷ್ಯದಲ್ಲಿ ಯಾವುದೇ ರೀತಿಯ ಹಾನಿ/ಪರಿಣಾಮ ಉಂಟಾಗುವ ಸಾಧ್ಯತೆ ವಿರಳವಾಗಿರುತ್ತದೆಯೆಂದು ಆಯುಕ್ತರು, ಮಹಾನಗರಪಾಲಿಕೆ, ಮಂಗಳೂರು ಇವರ ವರದಿ ನೀಡಿರುವ ಮೇರೆಗೆ ಹಾಗೂ ಸದ್ರಿ ಜಮೀನು ಪಾಲಿಕೆಗೆ ಉಪಯೋಗ ಹಾಗೂ ಅಗತ್ಯವಿಲ್ಲದ ಕಾರಣ 2013ರ ಭೂಸ್ವಾಧೀನ ಕಾಯ್ದೆಯಲ್ಲಿ ಕಲಂ 93(1) ಪ್ರಕರಣದಡಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಾಣಿಸಿದ ಜಮೀನನ್ನು ಭೂಸ್ವಾಧೀನತೆಯಿಂದ ಕೈಬಿಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## ಅನುಸೂಚನೆ

ಜಿಲ್ಲೆ: ದಕ್ಷಿಣ ಕನ್ನಡ ತಾಲೂಕು: ಮಂಗಳೂರು ಹೋಬಳಿ: ಗುರುಪುರ ಗ್ರಾಮ: ಕುಡುಪು

| ಕ್ರ.ಸಂ | ಭೂಮಾಲಕರ/ ಹಿತಾಸಕ್ತಿದಾರರ ಹೆಸರು | ಸರ್ವೆ ನಂಬ್ರ | ತರಹೆ | ಕಲಂ 11(1)ರ ಅಧಿಸೂಚನೆ ಯಂತೆ ವಿಸ್ತೀರ್ಣ | ರದ್ದುಪಡಿಸ ಬೇಕಾದ ವಿಸ್ತೀರ್ಣ | ಆಕಾರ |
|---|---|---|---|---|---|---|
| 1 | ಮಾಧವ್ ಭಟ್ - ಲಕ್ಷ್ಮೀ ನಾರಾಯಣ ಭಟ್ ರವೀಂದ್ರ ರಮೇಶ್, ರಾಜೇಂದ್ರ ಬಿನ್ ಮಾಧವ ಭಟ್ ರವರ ಮಕ್ಕಳು | 77/4ಎ2ಪಿ 4 | ಖುಷ್ಕಿ | 0.04.00 | 0.04.00 | 0.04 |
| | ಒಟ್ಟು | | | | 0.04.00 ಎಕ್ರೆ | |

ಜಿಲ್ಲಾಧಿಕಾರಿ
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

PR-105

ಮುದ್ರಕರು ಹಾಗೂ ಪ್ರಕಾಶಕರು:— ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ವಿಭಾಗೀಯ ಮುದ್ರಣಾಲಯ, ಮೈಸೂರು.

VIJAY N M